بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ವರ್ಷ: 03

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 07

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

17 ಫೆಬ್ರವರಿ 2022, 17 ಸುಲಹ್ 1401 ತಬ್‌ಲೀಗ್ ಹಿಜರಿ ಶಮ್‌ಸಿ, 15 ರಜಬ್ 1443 ಹಿಜರಿ ಖಮರಿ.


### ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰھُمَّ اَیِّدۡ اِمَامَنَا بِرُوۡحِ الۡقُدُسِ وَبَارِکۡ لَنَا فِیۡ عُمُرِہٖ وَاَمۡرِہٖ۔

### ಅಲ್ಲಾಹನ ಉಪದೇಶ

وَیَوۡمَ نَحۡشُرُھُمۡ جَمِیۡعًا ثُمَّ نَقُوۡلُ لِلَّذِیۡنَ اَشۡرَکُوۡۤا اَیۡنَ شُرَکَآؤُکُمُ الَّذِیۡنَ کُنۡتُمۡ تَزۡعُمُوۡنَ (الانعام:23)

(ಅಲ್‌ಅನ್‌ಆಂ : 23)

ಅಂದರೆ: ಅವರನ್ನೆಲ್ಲ ನಾವು ಒಂದುಗೂಡಿಸಿದ ಬಳಿಕ, ಬಹುದೇವಾರಾಧಕರೊಡನೆ, 'ನೀವು ಪ್ರತಿಪಾದಿಸುತ್ತಿದ್ದ, ನಿಮ್ಮ (ಕಲ್ಪನೆಯಲ್ಲಿದ್ದ ದೇವ) ಸಹಭಾಗಿಗಳೆಲ್ಲಿ?' ಎಂದು ನಾವು ಕೇಳುವ ದಿನ (ದ ಬಗ್ಗೆ ಯೋಚಿಸಿರಿ).

# ಹಝ್ರತ್ ಮುಸ್ಲಿಹ್ ಮೌಊದ ರಝಿಯಲ್ಲಾಹು ಅನ್‌ಹು ರವರ ಬಗ್ಗೆ ಭವಿಷ್ಯವಾಣಿ

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

**ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:**

"**ಬಇಲ್ಹಾಮಿಲ್ಲಾಹಿ ತಆಲಾ ವ ಇಲಾಮಿಹೀ ಅಝ್ಝವಜಲ್ಲ** ಕರುಣಾಮಯಿ ಹಾಗೂ ಗೌರವಾನ್ವಿತ ಹಾಗೂ ಶ್ರೇಷ್ಠ ಮತ್ತು ಎಲ್ಲಾ ವಿಷಯಗಳಲ್ಲಿಯು ಬಲಿಷ್ಠನಾದ ಅಲ್ಲಾಹನು (**ಜಲ್ಲ ಶನುಹೂ ವ ಅಝ್ಝ ಇಸ್‌ಮುಹೂ**) ನನಗೆ ತನ್ನ ದಿವ್ಯವಾಣಿಯ ಮೂಲಕ ಸಂಬೋಧಿಸಿ ಹೀಗೆ ನುಡಿದಿದ್ದಾನೆ: ನಾನು ನಿನಗೆ ನೀನು ನನ್ನೊಂದಿಗೆ ಬೇಡಿಕೊಂಡ ಹಾಗೆ ಒಂದು ಕರುಣೆಯ ಕುರುಹು ನೀಡುವೆನು. ನಾನು ನಿನ್ನ ವಿನಮ್ರತೆಯ ಪ್ರಾರ್ಥನೆಗಳನ್ನು (**ತಝರ್ರುಆತ್**) ಆಲಿಸಿ ತನ್ನ ಅನುಗ್ರಹದೊಂದಿಗೆ ಸ್ವೀಕೃತಿ ನೀಡಿದೆನು ಮತ್ತು ನಿನ್ನ ಪ್ರಯಾಣವನ್ನು (ಹೊಶ್ಯಾರ್‌ಪುರ ಮತ್ತು ಲುಧ್ಯಾನದ ಪ್ರಯಾಣ) ನಿನಗಾಗಿ ಶುಭಕರಗೊಳಿಸಿರುವೆನು. ಆದ್ದರಿಂದ ದೈವಶಕ್ತಿಯ ಮತ್ತು ಕರುಣೆ ಹಾಗೂ ಸಾಮಿಪ್ಯದ ಕುರುಹು ನಿನಗೆ ನೀಡಲಾಗುತ್ತಿದೆ. ಅನುಗ್ರಹ ಮತ್ತು ಉಪಕಾರದ ಕುರುಹು ನಿನಗೆ ನೀಡಲಾಗುತ್ತಿದೆ ಮತ್ತು ಗೆಲುವು(ಫತಹ್) ಹಾಗೂ ಸಫಲತೆಯ(ಝಫರ್) ಕೀಲಿಗೈ ನಿನಗೆ ಸಿಗುತ್ತಿದೆ. ಎಲೈ ಮುಝಫ್ಫರ್! ನಿನ್ನ ಮೇಲೆ ಶಾಂತಿ ಇರಲಿ. ಅಲ್ಲಾಹನು ಹೀಗೆ ಹೇಳಲು ಕಾರಣ ಜೀವಿಸಲು ಬಯಸುವವರು ಮೃತ್ಯುವಿನ ದವಡೆಯಿಂದ ಮುಕ್ತಿ ಪಡೆಯಲಿ ಮತ್ತು ಗೋರಿಗಳಲ್ಲಿ ಹೂತಲ್ಪಟ್ಟವರು ಹೊರ ಬರಲಿ ಮತ್ತು ಇಸ್ಲಾಮ್ ಧರ್ಮದ ಗೌರವ ಮತ್ತು ಅಲ್ಲಾಹನ ದಿವ್ಯವಾಣಿಗಳ(ಪವಿತ್ರ ಖುರ್‌ಆನ್) ಪದವಿ ಜನರ ಮೇಲೆ ಸ್ಪಷ್ಟವಾಗಲಿ. ಹೀಗೆ ಸತ್ಯವು ತನ್ನ ಎಲ್ಲ ಅನುಗ್ರಹಗಳೊಂದಿಗೆ ಬರುವಂತಾಗಲಿ ಹಾಗೂ ಮಿಥ್ಯವೂ ತನ್ನ ಎಲ್ಲ ಅಪಶಕುನದೊಂದಿಗೆ ಪಲಾಯನ ಮಾಡಲಿ. ಹೀಗೆ ಜನರು ತಿಳಿಯುವರು ನಾನು ಎಲ್ಲಾ ಕಾರ್ಯಗಳಲ್ಲೂ ಸರ್ವ ಸಮರ್ಥನಾಗಿದ್ದೇನೆ (ಖಾದಿರ್). ನಾನು ಬಯಸಿದನ್ನೆಲ್ಲ ಮಾಡಬಲ್ಲೆನು ಮತ್ತು ನಾನು ನಿನ್ನೊಂದಿಗಿದ್ದೇನೆ ಎಂದು ಅವರಿಗೆ ಮನವರಿಕೆ ಆಗಲಿ ಮತ್ತು ಯಾರು ಅಲ್ಲಾಹನ ಅಸ್ತಿತ್ವವನ್ನು ನಿರಾಕರಿಸುವರೊ, ಅಲ್ಲಾಹ್ ಮತ್ತು ಅಲ್ಲಾಹನ ಧರ್ಮ, ಅವನ ಗ್ರಂಥ ಮತ್ತು ಅವನ ಪ್ರವಾದಿ ಆದ ರಸೂಲ್ ಸಲಲ್ಲಾಹು ಅಲೈಹಿವಸಲ್ಲಮರನ್ನು ನಿರಾಕರಿಸುತ್ತಾರೆ ಮತ್ತು ಧಿಕ್ಕರಿಸುವ ದೃಷ್ಟಿಯಿಂದ ನೋಡುವವರೋ ಅವರಿಗಾಗಿ ಒಂದು ಸ್ಪಷ್ಟವಾದ ಮಾರ್ಗ ದೊರೆಯುವಂತಾಗಲಿ ಮತ್ತು ಅಪರಾಧಿಗಳ ಮಾರ್ಗವು ಬಹಿರಂಗವಾಗಲಿ.

ಆದ್ದರಿಂದ ನಿನಗೆ ಶುಭವಾರ್ತೆ ಇದೆ. ಓರ್ವ ಗೌರವಾನ್ವಿತ ಹಾಗೂ ಪರಿಶುದ್ಧ ಬಾಲಕ ನಿನಗೆ ನೀಡಲಾಗುವುದು. ಓರ್ವ ಪವಿತ್ರ ದಾಸ(ಬಾಲಕ) ನಿನಗೆ ದಯಪಾಲಿಸಲಾಗುವುದು. ಆ ಬಾಲಕನು ನಿನ್ನ ಅಂಶದಿಂದಲೇ (ಬೀಜ) ನಿನ್ನ ವಂಶ ಹಾಗೂ ಜನಾಂಗದಿಂದಾಗುವುದು. ಸುಂದರವಾದ ಮತ್ತು ಪವಿತ್ರ ಬಾಲಕ ನಿಮ್ಮ ಅತಿಥಿಯಾಗಿ ಬರುವನು ಅವನ ಹೆಸರು **ಅನ್‌ಮವಾಯೀಲ್** ಮತ್ತು ಬಶೀರ್ ಸಹ ಆಗಿರುವುದು. ಅವನಿಗೆ ಪರಿಶುದ್ಧ ಆತ್ಮ ನೀಡಲಾಗಿದೆ ಮತ್ತು ಅವನು ಕೊಳಕಿನಿಂದ ಪರಿಶುದ್ಧನಾಗಿದ್ದಾನೆ. ಅವನು ಅಲ್ಲಾಹನ ಪ್ರಕಾಶ ಆಗಿದ್ದಾನೆ. ಆ ಸೌಭಾಗ್ಯನು ಆಕಾಶದಿಂದ ಬರುವನು. ಅಲ್ಲಾಹನ ಕೃಪೆ ಅವನೊಂದಿಗೆ ಇದೆ ಅದು ಅವನೊಂದಿಗೆ ಬರುವುದು. ಅವನ ವ್ಯಕ್ತಿತ್ವವು ಅದ್ಭುತ, ಶ್ರೇಷ್ಠ ಹಾಗೂ ಸಂಪತ್ಭರಿತವಾಗಿರುತ್ತದೆ. ಅವನು ಲೋಕಕ್ಕೆ ಪಾದರ್ಪಣೆ ಮಾಡುವನು ಮತ್ತು ತನ್ನ ಮಸೀಹನ ಆತ್ಮದೊಂದಿಗೆ ಮತ್ತು **'ರೂಹುಲ್‌ಹಖ್ಖಿನೊಂದಿಗೆ'** ಜಿಬ್ರೀಲ್‌ನ ಅನುಗ್ರಹಗಳಿಂದ ಹಲವರನ್ನು ರೋಗಗಳಿಂದ ಮುಕ್ತಗೊಳಿಸುವನು. ಅವನು **'ಕಲಿಮತುಲ್ಲಾಹ್'** ಅಲ್ಲಾಹನ ದಿವ್ಯವಾಣಿ ಆಗಿದ್ದಾನೆ ಏಕೆಂದರೆ ಅಲ್ಲಾಹನ ಕರುಣೆ ಮತ್ತು ಮಹಾಸ್ವಾಭಿಮಾನವು ಅವನನ್ನು **ಕಲಿಮ ತಮ್‌ಜೀದಿನ** ಪವಿತ್ರ ಆತ್ಮದೊಂದಿಗೆ ಕಳುಹಿಸಿದ್ದಾನೆ. ಅವನು ಅತ್ಯಂತ ಬುದ್ಧಿವಂತನೂ ಮತ್ತು ವಿವೇಕಶಾಲಿಯು ಆಗಿರುವನು ಮತ್ತು ಹೃದಯವೈಶಾಲ್ಯ ಹೊಂದಿರುವನು ಹಾಗೂ ಲೌಕಿಕ ಹಾಗೂ ಆಂತರಿಕ ಜ್ಞಾನದಿಂದ ಪರಿಪೂರ್ಣನಾಗಿರುವನು. ಅವನು ಮೂರನ್ನು ನಾಲ್ಕು ಮಾಡುವನಾಗಿರುವನು (ಇದರ ಅರ್ಥ ತಿಳಿದುಬರಲಿಲ್ಲ) ದೊಶುಂಬ(ಸೋಮವಾರ) ಶುಭಕರ ದೋಶುಂಬ(ಸೋಮವಾರ)ವಾಗಿದೆ. ಆತ್ಮೀಯ ಮಗು ಪ್ರೀಯ ಮಗು **ಮಝ್‌ಹರುಲ್ ಅವ್ವಲಿ ವಲ್ ಆಖಿರೆ- ಮಝ್‌ಹರುಲ್ ಹಖ್ಖೆ ವಲ್‌ಅಲಾಎ- ಕಅನ್ನಲ್ಲಹ ನಝುಲ ಮಿನಸ್ಸಮಾಯಿ.** ಅವನ ಆಗಮನವೂ ಬಹಳ ಅನುಗ್ರಹದಾಯಕವಾಗಿದೆ ಮತ್ತು ಅಲ್ಲಾಹನ ಪ್ರತಾಪ ಕಾಣಲು ಕಾರಣವಾಗಿದೆ. ಪ್ರಕಾಶವು ಆಗಮಿಸುತ್ತದೆ ಪ್ರಕಾಶವ ನೋಡಿರಿ. ಅವನನ್ನು ಅಲ್ಲಾಹನು ತನ್ನ ಸಂಪ್ರೀತಿಯ ಸುಗಂಧದಿಂದ ಸಮ್ಮಿಲಿತಗೊಳಿಸಿದ್ದಾನೆ. ನಾವು ಅವನಲ್ಲಿ ತನ್ನ ಆತ್ಮವನ್ನು ಹಾಕುವೆನು, ಅಲ್ಲಾಹನ ನೆರಳು ಅವನ ಶಿರದ ಮೇಲೆ ಇರುವುದು. ಅವನು ಅತಿ ಅತಿ ವೇಗವಾಗಿ ಬೆಳೆಯುವನು ಮತ್ತು ಕೈದಿಗಳನ್ನು ಬಿಡುಗಡಗೊಳಿಸಲು ಕಾರಣವಾಗುವನು ಮತ್ತು ಭೂಮಿಯ ಅಂಚುಗಳವರೆಗೆ ಖ್ಯಾತಿ ಪಡೆಯುವನು ಹಾಗೂ ಜನಾಂಗಗಳು ಇವನಿಂದ ಅನುಗ್ರಹ ಪಡೆಯುವರು. ಆಗ ತನ್ನ ಆತ್ಮ ಬಿಂದು ಆಕಾಶದೆಡೆ ಎತ್ತಲ್ಪಡುವುದು **ವಕಾನ ಅಮ್‌ರಮ್ಮಖ್ಝೀಯ.**"

**(ಮಜ್‌ಮೂಆ ಇಶ್ತಿಹಾರಾತ್, ಸಂಪುಟ-1, ಪುಟ-100, ಇಶ್ತಿಹಾರ್ 20 ಫೆಬ್ರವರಿ 1886)**

**ಮಾನವನ ಕಾನೂನುಗಳಲ್ಲಿ ಸದಾ ಒಂದಲ್ಲ ಒಂದು ನ್ಯೂನತೆಯಿರುತ್ತದೆ. ಕೆಲಸದ ಹಕ್ಕುಗಳನ್ನು ದಮನಿಸಲಾಗುತ್ತದೆ ಅಥವಾ ಕೆಲವರಿಗೆ ಅಧಿಕ ಹಕ್ಕುಗಳನ್ನು ನೀಡಲಾಗುತ್ತದೆ.**
**ಯಾರೊಬ್ಬರಿಗೆ ಕಡಿಮೆಯೂ ಅಲ್ಲ, ಅಧಿಕವೂ ಇಲ್ಲ. ಎಲ್ಲರಿಗೂ ಸಮಾನ ಹಕ್ಕುಗಳನ್ನು ನೀಡುವಂತಹ ಕಾನೂನು ಕೇವಲ ಅಲ್ಲಾಹನು ಮಾಡಬಲ್ಲನು.**

ಸಯ್ಯದ್‌ನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ಸೂರಃ ಅನ್ನಹಲ್ ವಚನ 10 "**ವ ಅಲಲ್ಲಾಹಿ ಖಸ್‌ದುಸ್ಸಬೀಲಿ ವ ಮಿನ್‌ಹ ಜಾಇರುನ್, ವ ಲೌಶಾಅ ಲಹದಾಕುಮ್ ಅಜ್‌ಮೀನ**" ನ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ.

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

# ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**
ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِي الْعَالَمِ ✿ شَرُّ السُّمُوْمِ عَدَاوَةُ الصُّلَحَاءِ

**ತೌರಾತ್ ಮತ್ತು ಇಂಜೀಲ್ ಖುರ್‌ಆನ್‌ನ್ನು ಎದುರಿಸಲು ಹೇಗೆ ಸಾಧ್ಯ?
ಜ್ಞಾನದ ನೆಲೆಯಲ್ಲಿ ತೌರಾತ್ ಮತ್ತು ಇಂಜೀಲಿಗೆ ಸೂರಃ ಫಾತಿಹವನ್ನು ಎದುರಿಸುವ ಶಕ್ತಿ ಸಾಲದು. ಫಾದರಿ ಸಾಹೇಬರುಗಲೆಲ್ಲ ಸೇರಿ ತಮ್ಮ ಎಲ್ಲಾ ಗ್ರಂಥಗಳಿಂದ ಸೂರಃ ಫಾತಿಹವನ್ನು ಎದುರಿಸಿ ತೋರಿಸಿದರೆ ಅವರಿಗೆ ಐದು ನೂರು ರೂಪಾಯಿಗಳನ್ನು ನಗದು ಬಹುಮಾನ ಕೊಡುವ ವೈಭವಯುತ ಪಂಥಾಹ್ವಾನ ಮತ್ತು ದೃಢ ಸಂಕಲ್ಪ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥ "ಸಿರಾಜುದ್ದೀನ್ ಈಸಾಯಿ ಕೇ ಚಾರ್ ಸವಾಲೊಂ ಕಾ ಜವಾಬ್" ರೂಹಾನಿ ಖಝಾಯಿನ್ ಸಂಪುಟ 12 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ಸಿರಾಜುದ್ದೀನ್ ಈಸಾಯಿಯ ಬಗ್ಗೆಗಿನ ಪುಸ್ತಕದ ಪರಿಚಯದಲ್ಲಿ ಮೌಲಾನ ಜಲಾಲುದ್ದೀನ್ ಶಮ್ಸ್ ಸಾಹಿಬ್(ರ) ಬರೆದಿದ್ದಾರೆ. ಸಿರಾಜುದ್ದೀನ್ ಸಾಹಿಬ್ ಎಫ್ ಎಸ್ ಸಿ ಕಾಲೇಜ್ ಲಾಹೋರಿನ ಪ್ರೋಫೇಸರಾಗಿದ್ದರು. ಮೊದಲು ಅವರು ಮುಸಲ್ಮಾನರಾಗಿದ್ದರು. ಮತ್ತೆ ಫಾದರಿಗಳ ಸಹವಾಸ ಮತ್ತು ಆರೋಪಗಳಿಂದ ಪ್ರಭಾವಿತರಾಗಿ ಕ್ರೈಸ್ತರಾಗಿದ್ದರು. ಅವರು 1897ರಲ್ಲಿ ಖಾದಿಯಾನಿಗೆ ಬಂದು ಕೆಲ ದಿನ ಹಝ್ರತ್ ಮಸೀಹ್ ಮೌಊದ್(ಅ) ರವರ ಸಹವಾಸದಲ್ಲಿದ್ದರು. ಕ್ರೈಸ್ತ ಮತ ಮತ್ತು ಇಸ್ಲಾಂ ಮತದ ಕುರಿತು ಚರ್ಚಿಸಿ ಇಸ್ಲಾಮಿನ ಮಹಾನತೆಯನ್ನು ಒಪ್ಪಿಕೊಂಡಿದ್ದರು. ಮತ್ತು ನಮಾಝ್ ಸಹ ನಿರ್ವಹಿಸ ತೊಡಗಿದ್ದರು. ಆದರೆ ಲಾಹೋರ್‌ಗೆ ಹಿಂದಿರುಗಿ ಹೋದ ನಂತರ ಮತ್ತೆ ಫಾದರಿಗಳ ಬಲೆಗೆ ಸಿಕ್ಕಿಬಿದ್ದರು. ಹಾಗೂ ಕ್ರೈಸ್ತಮತ ಸ್ವೀಕರಿಸಿ ಹಝ್ರತ್ ಮಸೀಹ್ ಮೌಊದ್(ಅ) ರವರಿಗೆ ನಾಲ್ಕು ಪ್ರಶ್ನೆಗಳನ್ನು ಉತ್ತರ ಬಯಸಿ ಬರೆದು ಕಳುಹಿಸಿದರು.

ಹಝ್ರತ್ ಅಖ್‌ದಸ್(ಅ) ಅವುಗಳಿಗೆ ಉತ್ತರ ಬರೆದು ಅದರ ಹೆಸರು "ಸಿರಾಜುದ್ದೀನ್ ಈಸಾಯಿ ಕೇ ಚಾರ್ ಸವಾಲೊಂ ಕೆ ಜವಾಬ್" ಎಂದಿಟ್ಟು ಸಾರ್ವಜನಿಕರಿಗೆ ಪ್ರಯೋಜನ ಆಗುವಂತೆ 22 ಜೂನ್ 1897 ರಲ್ಲಿ ಪತ್ರಿಕೆಯ ರೂಪದಲ್ಲಿ ಪ್ರಕಟಿಸಿದರು.

ಶೀರ್ಷಿಕೆಯಿಂದಲೇ ಸ್ಪಷ್ಟವಾಗುವುದೆಂದರೆ ತೌರಾತ್ ಮತ್ತು ಇಂಜೀಲಿಗೆ ಪವಿತ್ರ ಖುರ್‌ಆನ್‌ನ ಕೇವಲ 7 ವಚನಗಳನ್ನು ಒಳಗೊಂಡ ಮೊದಲ ಸೂರವಾದ ಸೂರಾ ಫಾತಿಹಾದೊಂದಿಗೆ ಸ್ಪರ್ಧಿಸುವ ಶಕ್ತಿ ಹೊಂದಿಲ್ಲದಿರುವಾಗ ಸಂಪೂರ್ಣ ಖುರ್‌ಆನ್ ಅನ್ನು ಸ್ಪರ್ಧೆ ಒಡ್ಡಲು ಹೇಗೆ ಸಾಧ್ಯ? ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಫಾದರಿ ಸಾಹೇಬರುಗಳಿಗೆ ಪಂಥಾಹ್ವಾನ ನೀಡಿದರು. ಅವರು ತಮ್ಮ ಒಟ್ಟು ಎಪ್ಪತ್ತರ ಸಮೀಪ ಇರಬಹುದಾದ ಗ್ರಂಥಗಳಿಂದ ಕೇವಲ ಸೂರಃ ಫಾತಿಹದಲ್ಲಿರುವಷ್ಟು ಸಾಕ್ಷ್ಯಗಳನ್ನು ಆಧ್ಯಾತ್ಮಿಕ ಜ್ಞಾನಗಳಿಗೆ ಹೋಲಿಸಿ ಸ್ಪರ್ಧಾತ್ಮಕ ಉತ್ತರ ಬರೆದರೆ ಅವರಿಗೆ ಐದು ನೂರು ರೂಪಾಯಿಗಳ ಭಾರಿ ಬಹುಮಾನ ನೀಡಲಾಗುವುದು. ಆದರೆ ಅವರಿಗೆ ಈ ಅಲ್ಲಾಹನ ಜಟ್ಟಿಯ ಎದುರು ಬರಲು ಸಾಧ್ಯವಾಗಲಿಲ್ಲ. ಸಾಧ್ಯವಾಗುವುದೂ ಇಲ್ಲ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ವಾದವನ್ನು ಸತ್ಯವೆಂದು ಸಾಬೀತುಪಡಿಸಲು, ತೌರಾತ್ ಮತ್ತು ಇಂಜೀಲಿಗೆ, ಖುರ್‌ಆನನ್ನು ಹೋಲಿಸಿ ತುಲನಾತ್ಮಕ ಉತ್ತರ ಅವಶ್ಯವಾಗಿದೆ. ಹಾಗೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ವೈಭವಯುತ ಬಹುಮಾನದ ಪಂಥಾಹ್ವಾನ ಪ್ರಸ್ತುತಪಡಿಸುವ ಮೊದಲು ತೌರಾತ್ ಮತ್ತು ಇಂಜೀಲಿನ ಒಂದಿಷ್ಟು ತುಲನಾತ್ಮಕ ವಿವರ ಈ ಕೆಳಗೆ ಪ್ರಸ್ತುತಪಡಿಸಲಾಗುವುದು.

**ಖುರ್‌ಆನ್ ಎಲ್ಲಾ ಕಾಲಘಟ್ಟಗಳಲ್ಲೂ ಅಲ್ಲಾಹನ ದೃಷ್ಟಾಂತಗಳನ್ನು ಪ್ರಕಾಶಗಳನ್ನು ವ್ಯಕ್ತಪಡಿಸುವಂತಹ ಸಾವಿರಾರು ಜನರಿಗೆ ಜನ್ಮ ನೀಡಿದೆ. ಇಂಜೀಲ್ ಸಹ ಇಂತಹ ಜನರಿಗೆ ಜನ್ಮ ನೀಡಿದೆಯೇ?**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಒಂದು ಅತ್ಯುತ್ತಮವಾದ ತುಲನೆ ಖುರ್‌ಆನ್ ಮತ್ತು ಹದೀಸುಗಳಿಂದ ಸ್ಪಷ್ಟಪಡಿಸಿದರು. ಖುರ್‌ಆನ್ ಎಲ್ಲಾ ಕಾಲಘಟ್ಟಗಳಲ್ಲೂ ಸಾವಿರಾರು ಸಂಖ್ಯೆಯಲ್ಲಿ ಸತ್ಪುರುಷರು, ಸಜ್ಜನರು, ಸಂತರು, ಸೂಫಿಗಳಿಗೆ ಜನ್ಮ ನೀಡಿದೆ. ಆದರೆ ಇಂಜಿಲ್ ಸಹ ಈರೀತಿ ಜನ್ಮ ನೀಡಿದ್ದರೆ ಅದರ ಸಾಕ್ಷ್ಯ ಕೊಡಬೇಕು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಮಾನವನ ಗುಣ ಶಕ್ತಿಗಳ ಮೇಲೆ ಧರ್ಮದ ನಿಯಂತ್ರಣವೇನು. ಇಂಜೀಲ್ ಈ ಪ್ರಶ್ನೆಗೆ ಯಾವ ಉತ್ತರವೂ ನೀಡಿಲ್ಲ. ಏಕೆಂದರೆ ಇಂಜಿಲ್ ಜಾಣ್ಮೆ ಭರಿತ ಜ್ಞಾನದಿಂದ, ವಿಧಾನಗಳಿಂದ ದೂರವಾಗಿದೆ. ಆದರೆ ಪವಿತ್ರ ಖುರ್‌ಆನ್ ಬಹಳ ವಿವರವಾಗಿ ಪದೇ ಪದೇ ಈ ಸಮಸ್ಯೆಯನ್ನು ಪರಿಹರಿಸಿದೆ. ಧರ್ಮದ ಕೆಲಸ ತೋಳಗಳನ್ನು ಆಡು ಮಾಡಿ ತೋರಿಸಿದಂತೆ ಮನುಷ್ಯನ ಸಹಜ ಗುಣಗಳನ್ನು ಬಲಿಸುವುದು ಅಲ್ಲ. ಬದಲು ಧರ್ಮದ ಉದ್ದೇಶವೆಂದರೆ ಮನುಷ್ಯನಲ್ಲಿರುವ ಸಹಜ ಗುಣಶಕ್ತಿಗಳನ್ನು ಅದಕ್ಕೆ ತಕ್ಕುದಾದ ರೀತಿಯಲ್ಲಿ ಬಳಸಲು ಮಾರ್ಗದರ್ಶನ ನೀಡುವುದಾಗಿದೆ. ಯಾವುದೇ ಸಹಜ ಶಕ್ತಿಗಳನ್ನು ಕಿತ್ತು ಹಾಕುವುದು ಧರ್ಮಕ್ಕೆ ಸೇರಿದ್ದಲ್ಲ. ಅದರ ಸರಿಯಾದ ಬಳಕೆ ಮಾಡುವ ಅಧಿಕಾರವಿದೆ. ಕೇವಲ ಒಂದು ಗುಣ ದಯೆ ಅಥವಾ ಕ್ಷಮೆ ಯನ್ನೇ ಉದಾಹರಣೆಯಾಗಿ ತೆಗೆದುಕೊಳ್ಳಿ. ಅದರ ಮೇಲೆಯೇ ಒತ್ತಡ ಹೇರುವ ಬದಲು ಸೃಷ್ಟಿಯ ಎಲ್ಲಾ ಗುಣಶಕ್ತಿಗಳ ಸದ್ಬಳಕೆಗೆ ಒತ್ತು ನೀಡಬೇಕು. ಏಕೆಂದರೆ ಮಾನವ ಗುಣಶಕ್ತಿಗಳಲ್ಲಿ ಯಾವ ಗುಣಶಕ್ತಿಯೂ ಕೆಟ್ಟದ್ದಲ್ಲ, ಬದಲು ಅದರ ದುರ್ಬಳಕೆ ಮತ್ತು ಏಕಪಕ್ಷೀಯ ನಿರ್ಧಾರ ಕೆಟ್ಟದ್ದಾಗಿವೆ. ದೂಷಿತ ವ್ಯಕ್ತಿಯು ಕೇವಲ ಅವನ ಗುಣಶಕ್ತಿಗಳಿಂದ ದೂಷಿತನಾಗುವುದಿಲ್ಲ. ಬದಲು ಅದರ ದುರ್ಬಳಕೆಯಿಂದ ದೂಷಿತನಾಗುತ್ತಾನೆ. ಒಟ್ಟಿನಲ್ಲಿ ಗುಣಗಳನ್ನು ನೀಡಿದ ಆ ಗುಣವಂತನು ಎಲ್ಲಾ ಸಮುದಾಯಗಳಿಗೂ ಸಮಾನ ರೀತಿಯ ಗುಣಶಕ್ತಿಗಳನ್ನು ನೀಡಿದ್ದಾನೆ. ಯಾವ ರೀತಿ ಬಾಹ್ಯರೂಪವಾಗಿ ಮೂಗು, ಕಣ್ಣು, ಬಾಯಿ ಮತ್ತು ಕೈ ಕಾಲು ಇತ್ಯಾದಿ ಎಲ್ಲಾ ಸಮುದಾಯದ ಮನುಷ್ಯರಿಗೆ ನೀಡಿದ್ದಾನೋ ಅದೇ ರೀತಿ ಅಂತರಂಗದ ಶಕ್ತಿಗಳನ್ನು, ಆಧ್ಯಾತ್ಮಿಕ ಶಕ್ತಿಗಳನ್ನು ಸಹ ಎಲ್ಲರಿಗೂ ನೀಡಿದ್ದಾನೆ. ಮತ್ತು ಎಲ್ಲಾ ಸಮುದಾಯಗಳಲ್ಲೂ ಗುಣಗಳ ಸದ್ಬಳಕೆಯಿಂದಾಗಿ ಒಳ್ಳೆಯವರಿದ್ದಾರೆ. ಹಾಗೆಯೇ ದುರ್ಬಳಕೆಯಿಂದಾಗಿ ಕೆಟ್ಟವರೂ ಇದ್ದಾರೆ. ಆದರೆ ಧರ್ಮದ ಫಲವಾಗಿ ಒಂದು ಸಮುದಾಯ ಒಳ್ಳೆಯದಾಗಬೇಕಾದರೆ ಆ ಧರ್ಮದಿಂದಾಗಿ ಅದರ ಅನುಯಾಯಿಗಳಲ್ಲಿ ಆ ರೀತಿಯ ಆಧ್ಯಾತ್ಮಿಕ ಮಹಾನತೆ ಉಂಟಾಗಿವೆ ಎಂದು ಇತರ ಧರ್ಮಗಳು ಕಾಣುವಂತಾಗಬೇಕು. ಹಾಗೆ ನಾನು ಆಗ್ರಹ ಮಾಡಿ ಹೇಳುವೆನು. ಈ ವಿಶೇಷತೆ ಇಸ್ಲಾಮ್ ಧರ್ಮದಲ್ಲಿದೆ. ಇಸ್ಲಾಮ್ ಧರ್ಮವು ಸಾವಿರಾರು ಜನರಿಗೆ ಆ ಪವಿತ್ರ ಜೀವನ ಒದಗಿಸಿಕೊಟ್ಟಿದೆ. ನಾವು ಹೇಳಬಹುದಾಗಿದೆ ಅವರು ಅಲ್ಲಾಹನ ಸಾನಿಧ್ಯ ಪಡೆದವರಾಗಿದ್ದಾರೆ ಎಂದು. ಅಲ್ಲಾಹನು ಅವರನ್ನು ಎಷ್ಟರಮಟ್ಟಿಗೆ ಸ್ವೀಕರಿಸಿದ್ದಾನೆಂದರೆ ಅವರು ಅಲ್ಲಾಹನ ಪ್ರಕಾಶವನ್ನು ವ್ಯಕ್ತಪಡಿಸುವವರಾದರು. ಇಂತಹ ಜನರು ಎಲ್ಲ ಶತಮಾನಗಳಲ್ಲೂ ಅಗಲಿ ಹೋಗಿದ್ದಾರೆ. ಅವರ ಪವಿತ್ರವಾದ ಜೀವನ ಸಾಕ್ಷ್ಯವಿಲ್ಲದ್ದಲ್ಲ ಮತ್ತು ಬರೀ ಅವರ ಮೌಖಿಕ ದಾವೆ ಆಗಿರಲಿಲ್ಲ. ಬದಲು ಅವರ ಸಾತ್ವಿಕ ಜೀವನಕ್ಕೆ ಅಲ್ಲಾಹನು ಸಾಕ್ಷಿ ನೀಡಿದ್ದಾನೆ.

ನೆನಪಿರಲಿ ಅಲ್ಲಾಹನು ಪವಿತ್ರ ಖುರ್‌ಆನ್‌ನ ಉನ್ನತ ದರ್ಜೆಯ ಪವಿತ್ರ ಜೀವನದ ಉದಾಹರಣೆ ಹೀಗೆ ವ್ಯಕ್ತಪಡಿಸಿದ್ದಾನೆ. ಇಂತಹ ವ್ಯಕ್ತಿಗಳಿಂದ ಪವಾಡಗಳು ಸೃಷ್ಟಿಯಾಗುತ್ತವೆ. ಅಲ್ಲಾಹನು ಅವರ ಪ್ರಾರ್ಥನೆಗಳನ್ನು ಸ್ವೀಕರಿಸುತ್ತಾನೆ. ಮತ್ತು ಅವರೊಡನೆ ಸಂಭಾಷಿಸುತ್ತಾನೆ ಮತ್ತು ಅಗೋಚರ ಸಮಾಚಾರಗಳಿಂದ ಅರಿವು ನೀಡುತ್ತಾನೆ ಮತ್ತು ಅವರನ್ನು ಪುಷ್ಟಿಕರಿಸುತ್ತಾನೆ. ಆದುದರಿಂದ ನಾವು ನೋಡುತ್ತಿದ್ದೇವೆ. ಇಸ್ಲಾಮ್ ಧರ್ಮದಲ್ಲಿ ಇಂತಹ ಸಾವಿರಾರು ಜನರು ಅಗಲಿ ಹೋಗಿದ್ದಾರೆ. ಅಂದಹಾಗೆ ಈ ಕಾಲಘಟ್ಟದಲ್ಲಿ ಈ ವಿನೀತನು ಮಾದರಿಗಳನ್ನು ತೋರಿಸಲು ಉಪಸ್ಥಿತನಿದ್ದೇನೆ. ಆದರೆ ಕ್ರೈಸ್ತರಲ್ಲಿ ಇಂತಹ ಜನರು ಎಲ್ಲಿದ್ದಾರೆ ಮತ್ತು ಯಾವ ದೇಶದಲ್ಲಿ ವಾಸಿಸುತ್ತಾರೆ. ಅವರು ಇಂಜೀಲಿನ ಸಾಕ್ಷ್ಯಗಳನ್ನು ದೃಷ್ಟಾಂತಗಳನ್ನು ಅದಕ್ಕನುಗುನವಾಗಿ ತಮ್ಮ ಯಥಾರ್ಥ ವಿಶ್ವಾಸ ಮತ್ತು ಪವಿತ್ರ ಜೀವನ ಸಾಬೀತುಪಡಿಸುವಂತಾಗಬೇಕು. ಅವರು ಸಾಬೀತುಪಡಿಸಬಹುದೇ? (ಸಿರಾಜುದ್ದೀನ್ ಈಸಾಯಿ ಕೆ ಚಾರ್ ಸವಾಲೋಂ ಕೆ ಜವಾಬ್, ರೂಹಾನಿ ಖಝಾಈನ್, ಪುಟ-340).

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ನಾನು ಸತ್ಯವಾಗಿ ಹೇಳುತ್ತೇವೆ. ನಾನು ಸರಿಯಾದ ರೀತಿಯಲ್ಲಿ ಸಂಬೋಧಿಸಿ ಹೇಳುತ್ತೇನೆ. ಆದಮ್ ಸಂತತಿಯ ಸಂಘನೆಯ ಮೇಲೆ ವಿಚಾರಿಸಿದರೆ ತಿಳಿದುಬರುತ್ತದೆ. ಎಷ್ಟರಮಟ್ಟಿಗೆ ಇಸ್ಲಾಮ್‌ನಲ್ಲಿ ಮತ್ತು ಇಸ್ಲಾಮಿನ ಪರವಾಗಿ

*(ಪುಟ 08 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹಝ್ರತ್ ಅಬೂಬಕರ್(ರ) ವ್ಯಾಪಾರಿಯಾದ ಕಾರಣದಿಂದ ಈ ಮಾರ್ಗವಾಗಿ ಬಂದುಹೋಗುತ್ತಿದ್ದರು. ಆದ್ದರಿಂದ ಹೆಚ್ಚಿನ ಜನರಿಗೆ ಅವರ ಪರಿಚಯವಿತ್ತು. ಆದರೆ ಜನರಿಗೆ ಹಝ್ರತ್ ಪೈಗಂಬರ್(ಸ)ರ ಪರಿಚಯವಿರಲಿಲ್ಲ. ಆದ್ದರಿಂದ ನಿಮ್ಮ ಮುಂದೆ ಮುಂದೆಯಾಗಿ ಇರುವುದು ಯಾರೆಂದು ಜನರು ಅಬೂಬಕರ್(ರ)ರೊಡನೆ ಕೇಳುತ್ತಿದ್ದರು. ಹಝ್ರತ್ ಅಬೂಬಕರ್(ರ) ಹೇಳುತ್ತಿದ್ದರು: ಹಾಧಾ ಯಹ್‌ದೀನಿಯಸ್ಸಬೀಲ. 'ಇವರು ನನ್ನ ಮಾರ್ಗದರ್ಶಕ.'**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಸುರಾಖ ಮರಳಲು ಹೊರಟಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಕಿಸ್ರಾನ ಬಳೆಗಳು ನಿನ್ನ ಕೈಗಳಲ್ಲಿ ಬರುವಾಗ ನಿನ್ನ ಸ್ಥಿತಿ ಏನಾಗಿರುವುದು? ಸುರಾಖ ಅಚ್ಚರಿಗೊಂಡು ಕೇಳಿದನು: ಇರಾನಿನ ಅರಸನಾದ ಕಿಸ್ರಾ ಬಿನ್ ಹುರ್ಮುಝ್‌ನ ಬಳೆಗಳೇ? ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಸುರಾಖ ದಂಗಾದನು. ಆದರೆ ಅಲ್ಲಾಹನ ಶಕ್ತಿಯನ್ನು ನೋಡಿರಿ. ಹಝ್ರತ್ ಉಮರ್(ರ)ರ ಕಾಲದಲ್ಲಿ ಇರಾನಿನ ಮೇಲೆ ವಿಜಯ ಸಾಧಿಸಲಾದಾಗ ಮತ್ತು ಕಿಸ್ರಾನ ಸಂಪತ್ತು ಮುಸ್ಲಿಮರ ಕೈಗೆ ಬಂದಾಗ ಕಿಸ್ರಾನ ಬಳೆಗಳು ಕೂಡ ಯುದ್ಧ ಸಂಪತ್ತಿನ ಜೊತೆಗೆ ಮದೀನಕ್ಕೆ ಬಂತು. ಹಝ್ರತ್ ಉಮರ್(ರ) ಸುರಾಖನನ್ನು ಕರೆದರು. ಸುರಾಖ ಮಕ್ಕಾ ವಿಜಯದ ನಂತರ ಮುಸ್ಲಿಮನಾಗಿದ್ದನು. ಅವನ ಕೈಗಳಲ್ಲಿ ಅಮೂಲ್ಯವಾದ ಬಳೆಗಳನ್ನು ತೊಟ್ಟರು.**

**8 ದಿನಗಳ ಯಾತ್ರೆಯನ್ನು ಮಾಡಿ ದೈವಿಕ ಸಹಾಯದೊಂದಿಗೆ ಕೊನೆಗೆ ಸೋಮವಾರದಂದು ಹಝ್ರತ್ ಪೈಗಂಬರ್(ಸ) ಖುಬಾ ತಲುಪಿದರು. ಹದೀಸ್‌ಗಳಲ್ಲಿ ಹೀಗೆ ಬಂದಿದೆ: ಸೋಮವಾರದಂದು ಹಝ್ರತ್ ಪೈಗಂಬರ್(ಸ) ಜನಸಿದ್ದರು. ಸೋಮವಾರದಂದೇ ಅವರು ಮಕ್ಕದಿಂದ ಹೊರಟರು. ಸೋಮವಾರದಂದೇ ಮದೀನ ತಲುಪಿದ್ದರು.**

**ಮೂರು ದಿವಂಗತರಾದ ಬಹಾವಲ್‌ಪೂರಿನ ಸನ್ಮಾನ್ಯ ಮುಹಮ್ಮದ್ ಶರೀಫ್ ಕ್ಲಾರ್ ಸಾಹಿಬ್‌ರ ಪುತ್ರರಾದ ಸನ್ಮಾನ್ಯ ಚೌಧರಿ ಅಸ್ಗರ್ ಅಲಿ ಕ್ಲಾರ್ ಸಾಹಿಬ್, ರಬ್ವದ ವಕಾಲತ್ ಉಲ್‌ಯದ ಉದ್ಯೋಗಿಯಾದ ಸನ್ಮಾನ್ಯ ಮಿರ್ಝಾ ಮುಮ್ತಾಝ್ ಅಹ್ಮದ್ ಸಾಹಿಬ್ ಮತ್ತು ರಬ್ವದ ಫಝ್ಲೇ ಉಮರ್ ಆಸ್ಪತ್ರೆಯ ಮಾಜಿ ಕಾರ್ಯನಿರ್ವಾಹಕ ಸನ್ಮಾನ್ಯ ಕರ್ನಲ್ ನಿವೃತ್ತ ಡಾಕ್ಟರ್ ಅಬ್ದುಲ್ ಖಾಲಿಕ್ ಸಾಹಿಬ್‌ರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **14-01-2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ - اَلرَّحْمٰنِ الرَّحِيْمِ - مٰلِكِ يَوْمِ الدِّيْنِ -

اِيَّاكَ نَعْبُدُ وَاِيَّاكَ نَسْتَعِيْنُ - اِهْدِنَا الصِّرَاطَ الْمُسْتَقِيْمَ -

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ -

ಕಳೆದ ಖುತ್ಬಕ್ಕೆ ಮುಂಚಿನ ಖುತ್ಬದಲ್ಲಿ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರ ಪ್ರಸ್ತಾಪ ನಡೆಯುತ್ತಿತ್ತು. ಹಿಜ್ರತ್ ಯಾತ್ರೆಯ ವೇಳೆ ಸುರಾಖ ಬಿನ್ ಮಾಲಿಕ್ ಹಿಂಬಾಲಿಸಿದ ಕುರಿತು ಕೆಲವು ವರದಿಗಳು ಇವೆ. ಒಂದು ವರದಿಯ ಪ್ರಕಾರ ಸುರಾಖ ಮರಳಿ ಹೋಗುವಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಸುರಾಖ, ಇರಾನನ ಅರಸನ ಬಳೆಗಳು ನಿನ್ನ ಕೈಗಳಲ್ಲಿ ಬರುವಾಗ ನಿನ್ನ ಸ್ಥಿತಿ ಏನಾಗಿರುವುದು? ಸುರಾಖ ಆಶ್ಚರ್ಯಗೊಂಡು ತಿರುಗಿ ನೋಡಿ ಕೇಳಿದನು: ಕಿಸ್ರಾ ಬಿನ್ ಹುರ್ಮುಝ್‌ನ ಬಗ್ಗೆ ಹೇಳುತ್ತಿದ್ದೀರಾ?

ಹಝ್ರತ್ ಪೈಗಂಬರ್(ಸ) ಹೇಳಿದರು: ಹೌದು, ಕಿಸ್ರಾ ಬಿನ್ ಹುರ್ಮುಝ್. ಹೀಗೆ ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ ಕಿಸ್ರಾನ ಬಳೆಗಳು, ಕಿರೀಟ ಮತ್ತು ಸೊಂಟ ಪಟ್ಟಿ ತರಲಾದಾಗ ಹಝ್ರತ್ ಉಮರ್(ರ) ಸುರಾಖರನ್ನು ಕರೆದರು ಮತ್ತು ಅವರಿಗೆ ಈ ಬಳೆಗಳನ್ನು ತೊಡಿಸಿದರು ಹಾಗೂ ಹೀಗೆ ಹೇಳಿದರು: ಹೇಳು, ಕಿಸ್ರಾ ಬಿನ್ ಹುರ್ಮುಝ್‌ನಿಂದ ಈ ಎರಡನ್ನೂ ಕಸಿದುಕೊಂಡು ನೀಡಿದ ಅಲ್ಲಾಹನಗೆ ಎಲ್ಲ ಸ್ತುತಿಗಳು. (ಮುಹಮ್ಮದ್ ರಸೂಲುಲ್ಲಾಹ್ ವಲ್ಲಝೀನ ಮಅಹು ಲಿಅಬ್ದಿಲ್ ಹಮೀದ್ ಜೋದತುಸ್ಸಹ್ಹಾರ್, ಸಂಪುಟ-3, ಪುಟ-65, ಮಕ್ತಬ ಮಿಸರ್)

ಹುನೈನ್ ಮತ್ತು ತಾಯಿಫ್‌ನಂದ ಮರಳುವಿಕೆಯ ಯಾತ್ರೆಯ ವೇಳೆ, ಸುರಾಖ ಇಸ್ಲಾಂ ಸ್ವೀಕರಿಸಿದಾಗ ಅವರಿಗೆ ಈ ಸುವಾರ್ತೆಯನ್ನು ನೀಡಲಾಯಿತು ಎಂದೂ ಪ್ರಸ್ತಾಪವಿದೆ.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ತನ್ನ ಸೀರತ್ ಖಾತಮುನ್ನಬಿಯ್ಯೀನ್ ಎಂಬ ಗ್ರಂಥದಲ್ಲಿ ಹೀಗೆ ಬರೆದಿರುವರು: ಒಬ್ಬ ವ್ಯಕ್ತಿ ಕುದುರೆಯನ್ನು ಓಡಿಸುತ್ತಾ ಅವರ ಹಿಂದೆ ಬರುವುದಾಗಿ ಹಝ್ರತ್ ಅಬೂಬಕರ್(ರ) ನೋಡಿದರು. ಆಗ ಹಝ್ರತ್ ಅಬೂಬಕರ್(ರ) ಗಾಬರಿಗೊಂಡು ಹೇಳಿದರು: ಯಾ ರಸೂಲುಲ್ಲಾಹ್ ಯಾರೋ ನಮ್ಮನ್ನು ಹಿಂಬಾಲಿಸುತ್ತಿದ್ದಾನೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಚಿಂತೆ ಮಾಡಬೇಡ. ಅಲ್ಲಾಹನು ನಮ್ಮೊಂದಿಗಿದ್ದಾನೆ. ಹಿಂಬಾಲಿಸುವವನು ಸುರಾಖ ಬಿನ್ ಮಾಲಿಕ್ ಆಗಿದ್ದನು. ಸುರಾಖ ಈ ಘಟನೆಯನ್ನು ತನ್ನ ಮಾತಿನಲ್ಲೇ ಹೀಗೆ ಹೇಳಿರುವರು: ಹಝ್ರತ್ ಪೈಗಂಬರ್(ಸ) ಮಕ್ಕದಿಂದ ಹೊರಟಾಗ ಖುರೈಶಿಗಳು ಹೀಗೆ ಘೋಷಿಸಿದರು: ಯಾರಾದರೂ ಮುಹಮ್ಮದ್(ಸಲ್ಲಲ್ಲಾಹು ಅಲೈಹಿ ವಸಲ್ಲಮ್)ರನ್ನು ಜೀವಂತವಾಗಿ ಅಥವಾ ಮರಣದ ಸ್ಥಿತಿಯಲ್ಲಿ ಹಿಡಿದುಕೊಂಡು ಬರುವರೋ ಅವರಿಗೆ ಕೊಡುಗೆಯನ್ನು ನೀಡಲಾಗುವುದು. ದೂತರ ಮೂಲಕ ಈ ಸುದ್ದಿ ನಮಗೂ ತಲುಪಿತು.

ಹಝ್ರತ್ ಬಶೀರ್ ಅಹ್ಮದ್ ಸಾಹಿಬ್(ರ) ಹಿಂಬಾಲಿಸುವುದರ ವಿರುದ್ಧವಾಗಿ ಶಕುನ ಫಲ ಬಂದ ಬಗ್ಗೆ ಮತ್ತು ಕುದುರೆಯ ಕಾಲುಗಳು ಮರಳಿನಲ್ಲಿ ಹೂತು ಹೋದ ಕುರಿತು ಇರುವ ವಿವರಣೆಯನ್ನು ನೀಡಿರುವರು. ಸುರಾಖ ಹೇಳುತ್ತಾನೆ: ಆ ವ್ಯಕ್ತಿಯ ನಕ್ಷತ್ರ ಫಲ ಯಶಸ್ಸಿನಲ್ಲಿದೆ ಮತ್ತು ಕೊನೆಗೆ ಹಝ್ರತ್ ಪೈಗಂಬರ್(ಸ) ವಿಜಯಿಯಾಗುವರು ಎಂದು ನಾನು ಈ ಘಟನೆಯಿಂದ ತಿಳಿದೆನು.

ಬಳೆಗಳನ್ನು ಹಾಕುವುದರ ಬಗ್ಗೆ ಇರುವ ಭವಿಷ್ಯವಾಣಿಯ ಪ್ರಸ್ತಾಪ ಮಾಡುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಸುರಾಖ ಮರಳಲು ಹೊರಟಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಕಿಸ್ರಾನ ಬಳೆಗಳು ನನ್ನ ಕೈಗಳಲ್ಲಿ ಬರುವಾಗ ನಿನ್ನ ಸ್ಥಿತಿ ಏನಾಗಿರುವುದು? ಸುರಾಖ ಅಚ್ಚರಿಗೊಂಡು ಕೇಳಿದನು: ಇರಾನಿನ ಅರಸನಾದ ಕಿಸ್ರಾ ಬಿನ್ ಹುರ್ಮುಝ್‌ನ ಬಳೆಗಳೇ? ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಸುರಾಖ ದಂಗಾದನು. ಆದರೆ ಅಲ್ಲಾಹನ ಶಕ್ತಿಯನ್ನು ನೋಡಿರಿ. ಹಝ್ರತ್ ಉಮರ್(ರ)ರ ಕಾಲದಲ್ಲಿ ಇರಾನನ ಮೇಲೆ ವಿಜಯ ಸಾಧಿಸಲಾದಾಗ ಮತ್ತು ಕಿಸ್ರಾನ ಸಂಪತ್ತು ಮುಸ್ಲಿಮರ ಕೈಗೆ ಬಂದಾಗ ಕಿಸ್ರಾನ ಬಳೆಗಳು ಕೂಡ ಯುದ್ಧ ಸಂಪತ್ತಿನ ಜೊತೆಗೆ ಮದೀನಕ್ಕೆ ಬಂತು. ಹಝ್ರತ್ ಉಮರ್(ರ) ಸುರಾಖನನ್ನು ಕರೆದರು. ಸುರಾಖ ಮಕ್ಕಾ ವಿಜಯದ ನಂತರ ಮುಸ್ಲಿಮನಾಗಿದ್ದನು. ಅವನ ಕೈಗಳಲ್ಲಿ

ಅಮೂಲ್ಯವಾದ ಬಳೆಗಳನ್ನು ತೊಟ್ಟರು. (ಸೀರತ್ ಖಾತಮನ್ನಬೀಈನ್, ಪುಟ-240-242)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಸುರಾಖ ಮರಳಲು ಹೊರಟ ಕ್ಷಣದಲ್ಲೇ ಅಲ್ಲಾಹನು ಭವಿಷ್ಯದ ಸ್ಥಿತಿಗತಿಗಳನ್ನು ಹಝ್ರತ್ ಪೈಗಂಬರ್(ಸ)ರಿಗೆ ತೋರಿಸಿ ಕೊಟ್ಟನು. ಹಝ್ರತ್ ಪೈಗಂಬರ್(ಸ) ಹೇಳಿದರು: ಕಿಸ್ರಾನ ಬಳೆಗಳು ನಿನ್ನ ಕೈಗಳಲ್ಲಿ ಬರುವಾಗ ನಿನ್ನ ಸ್ಥಿತಿ ಏನಾಗಿರುವುದು. ಹಝ್ರತ್ ಪೈಗಂಬರ್(ಸ)ರ ಈ ಭವಿಷ್ಯವಾಣಿಯು 16, 17 ವರ್ಷಗಳ ನಂತರ ಅಕ್ಷರಶಃ ಈಡೇರಿತು. ಸುರಾಖ ಮುಸ್ಲಿಮನಾಗಿ ಮದೀನಕ್ಕೆ ಬಂದನು. ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಮೊದಲು ಹಝ್ರತ್ ಅಬೂಬಕರ್(ರ) ಅನಂತರ ಹಝ್ರತ್ ಉಮರ್(ರ) ಖಲೀಫರಾದರು. ಇಸ್ಲಾಮಿನ ಪ್ರಗತಿ ಮತ್ತು ವೈಭವವನ್ನು ಕಂಡು ಇರಾನಿಯರು ಮುಸ್ಲಿಮರ ಮೇಲೆ ಆಕ್ರಮಣ ನಡೆಸಲು ಶುರು ಮಾಡಿದರು. ಇಸ್ಲಾಮನ್ನು ತುಳಿಯುವುದಕ್ಕೆ ಬದಲಾಗಿ ಇಸ್ಲಾಮಿನ ಮುಂದೆ ಬಂದು ಸ್ವತಃ ತುಳಿಯಲ್ಪಟ್ಟರು. ಇರಾನಿನ ಸಂಪತ್ತು ಮುಸ್ಲಿಮರ ಅಧೀನಕ್ಕೆ ಬಂತು. ಆ ಸಂಪತ್ತಿನಲ್ಲಿ ಕಿಸ್ರಾನ ಬಳೆಗಳು ಸಹ ಇದ್ದುವು. ಸುರಾಖ ಮುಸ್ಲಿಮನಾದ ನಂತರ ತನ್ನ ಈ ಘಟನೆಯನ್ನು ಮುಸ್ಲಿಮರಿಗೆ ಬಹಳ ಹೆಮ್ಮೆಯಿಂದ ಹೇಳಿಕೊಡುತ್ತಿದ್ದರು ಮತ್ತು ಮುಸ್ಲಿಮರು ಈ ಸಂಗತಿಯನ್ನು ತಿಳಿದಿದ್ದರು. ಇರಾನಿನ ಮೇಲೆ ವಿಜಯಗಳ ನಂತರ ಯುದ್ಧ ಸಂಪತ್ತಿನಲ್ಲಿ ಹಝ್ರತ್ ಉಮರ್(ರ) ಕಿಸ್ರಾನ ಬಳೆಗಳನ್ನು ನೋಡಿದಾಗ ಸಂಪೂರ್ಣ ನಖಾಶೆ ಅವರ ಕಣ್ಣುಗಳ ಮುಂದೆ ಬಂತು. ಆ ದುರ್ಬಲ ಮತ್ತು ಬಲಹೀನತೆಯ ಸಮಯದಲ್ಲಿ ಅಲ್ಲಾಹನ ಪ್ರವಾದಿ ತನ್ನ ಸ್ವದೇಶವನ್ನು ಬಿಟ್ಟು ಮದೀನಕ್ಕೆ ಹೋದದ್ದು, ಹೇಗಾದರೂ ಹಝ್ರತ್ ಪೈಗಂಬರ್(ಸ)ರನ್ನು ಹಿಡಿದು ಮಕ್ಕಾ ನಿವಾಸಿಗಳಿಗೆ ಒಪ್ಪಿಸಿ ನೂರು ಒಂಟೆಗಳ ಮಾಲಿಕರಾಗಲಿಕ್ಕಾಗಿ ಸುರಾಖ ಮತ್ತು ಇತರ ವ್ಯಕ್ತಿಗಳು ಹಝ್ರತ್ ಪೈಗಂಬರ್(ಸ)ರನ್ನು ಹಿಂಬಾಲಿಸಿ ಕುದುರೆಯನ್ನು ಓಡಿಸಿದ್ದು, ಆ ಸಮಯದಲ್ಲಿ ಸುರಾಖನಿಗೆ ಹಝ್ರತ್ ಪೈಗಂಬರ್(ಸ) ಸುವಾರ್ತೆ ನೀಡಿದ್ದು. ಇದು ಎಷ್ಟು ಮಹತ್ತಾದ ಭವಿಷ್ಯವಾಣಿಯಾಗಿತ್ತು, ಎಷ್ಟು ಸ್ಪಷ್ಟವಾಗಿ ಅದೃಶ್ಯದ ಕುರಿತಿನ ಸುವಾರ್ತೆಯಾಗಿತ್ತು! ಕಿಸ್ರಾನ ಬಳೆಗಳನ್ನು ತನ್ನ ಕೈಗಳಿಗೆ ತೊಡಿಸಲು ಹಝ್ರತ್ ಉಮರ್(ರ) ಸುರಾಕನೊಡನೆ ಆಜ್ಞಾಪಿಸಿದರು. ಚಿನ್ನವನ್ನು ಧರಿಸುವುದು ಮುಸ್ಲಿಮ್ ಪುರುಷರಿಗೆ ನಿಷಿದ್ಧವಲ್ಲವೇ ಎಂದು ಸುರಾಖ ಕೇಳಿದರು. ಹಝ್ರತ್ ಉಮರ್(ರ) ಹೇಳಿದರು: ಹೌದು ನಿಷಿದ್ಧ, ಆದರೆ ಈ ಸಂದರ್ಭಗಳಲ್ಲಿ ಅಲ್ಲ. ಅಲ್ಲಾಹನು ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ನಿನ್ನ ಕೈಗಳಲ್ಲಿ ಬಂಗಾರದ ಬಳೆಗಳನ್ನು ತೋರಿಸಿಕೊಟ್ಟಿದ್ದನು. ನೀನು ಈ ಬಳೆಗಳನ್ನು ತೊಡು, ಇಲ್ಲದಿದ್ದರೆ ನಾನು ನಿನ್ನನ್ನು ಶಿಕ್ಷಿಸುವೆನು. ಕೇವಲ ಶರೀಅತಿನ ವಿಷಯವಾದ್ದರಿಂದ ಸುರಾಖ ಹೀಗೆ ಆಕ್ಷೇಪವೆತ್ತಿದ್ದರು. ಇಲ್ಲದಿದ್ದರೆ ಹಝ್ರತ್ ಪೈಗಂಬರ್(ಸ)ರ ಈ ಭವಿಷ್ಯವಾಣಿ ಈಡೇರುವುದನ್ನು ನೋಡಲು ಅವರೂ ಬಯಸುತ್ತಿದ್ದರು. ಸುರಾಖ ಆ ಬಳೆಗಳನ್ನು ತನ್ನ ಕೈಗಳಿಗೆ ಹಾಕಿದರು. ಮುಸ್ಲಿಮರು ಈ ಮಹತ್ತಾದ ಭವಿಷ್ಯವಾಣಿ ಈಡೇರುವುದಾಗಿ ಕಣ್ಣಾರೆ ಕಂಡರು. (ದೀಬಾಚ ತಫ್ಸೀರುಲ್ ಖುರ್ಆನ್, ಅನ್ವರುಲ್ ಉಲೂಮ್, ಸಂಪುಟ-20, ಪುಟ-224-226)

ನಂತರ ಅವನು ಹಿಂದಿರುಗಿದಾಗ ಅವನನ್ನು ಹುಡುಕಲು ಖುರೈಷಿಗಳು ಕಳುಹಿಸಿದ್ದ ಕಾರವಾನ್ ಸುರಾಖನನ್ನು ಅವನ ಕಾರವಾನ್ ಬಗ್ಗೆ ಕೇಳಿದೆ ಎಂದು ಉಲ್ಲೇಖಿಸಲಾಗಿದೆ ಆದರೆ ಸುರಾಖ ಪ್ರವಾದಿ(ಸ)ರ ಕಾರವಾನ್ ಬಗ್ಗೆ ಏನನ್ನೂ ಹೇಳಲಿಲ್ಲ ಆದರೆ ಅವರು ಹೇಳೀದ್ದೇನೆಂದರೆ ಅವರನ್ನು ಹಿಂಬಾಲಿಸಿದವರು ಹಿಂತಿರುಗಿದ್ದಾರೆ. (ಸಬ್ಲುಲ್ ಹುದಾ ವರ್‍ರಶ್ಯಾದ್, ಸಂಪುಟ-3, ಪುಟ-249, ದಾರುಲ್ ಕುತುಬ್ ಇಲ್ಮಿಯ ಬೈರೂತ್ 1993)

ಈ ವಲಸೆಯ ಪಯಣದಲ್ಲಿ ಉಮ್ಮೇ ಮಅ್ಬದ್‌ನ ಒಂದು ಘಟನೆಯನ್ನು ಉಲ್ಲೇಖಿಸಲಾಗಿದೆ. ಹಿಜ್ರತ್ ಯಾತ್ರೆಯ ವೇಳೆ ಹಝ್ರತ್ ಪೈಗಂಬರ್(ಸ)ರ ಸಂಘ ಆಹಾರ ಸಾಮಾಗ್ರಿಗಳಿಗಾಗಿ ಉಮ್ಮೇ ಮಅ್ಬದ್‌ರ ಡೇರೆಯ ಬಳಿ ತಂಗಿತು. ಇದು ಉಮ್ಮೇ ಮಅ್ಬದ್ ಅವರ ಡೇರೆಯಾಗಿತ್ತು. ಉಮ್ಮೇ ಮಅ್ಬದ್ ಅವರ ಹೆಸರು ಆತೇಕಾ ಬಿಂತ್ ಖಾಲಿದ್ ಎಂದಾಗಿದೆ. ಅವರು ಖುಝಾಅನ ಬನು ಕಾಬ್ ಶಾಖೆಗೆ ಸೇರಿದವರು. ಅವರು ಹಝ್ರತ್ ಹುಬೈಶ್ ಬಿನ್ ಖಾಲಿದ್ ಅವರ ಸಹೋದರಿಯಾಗಿದ್ದರು, ಅವರು ಸಹಾಬಿ ಮತ್ತು ವರದಿಗಾರು ಎಂದು ಸಹ ಸೌಭಾಗ್ಯ ಹೊಂದಿದ್ದರು. ಉಮ್ಮೇ ಮಅ್ಬದ್ ಅವರ ಗಂಡನ ಹೆಸರು ಅಬು ಮಅಬದ್. ಅವರು ಪ್ರವಾದಿ ಮುಹಮ್ಮದ್(ಸಲ್ಲಲ್ಲಾಹು ಅಲೈಹಿವಸಲ್ಲಮ್) ಅವರಿಂದಲೂ ವಿವರಿಸಿದ್ದಾರೆ ಎಂದು ಹೇಳಲಾಗುತ್ತದೆ. ಅವರು ಪ್ರವಾದಿ(ಸ) ಅವರ ಜೀವನದಲ್ಲಿ ನಿಧನರಾದರು. ಉಮ್ಮೇ ಮಅ್ಬದ್ ಅವರ ಡೇರೆಯು ಖುದೈದ್‌ನಲ್ಲಿತ್ತು. ಖುದೈದ್ ಎಂಬುದು ಮೆಕ್ಕಾ ಬಳಿಯ ಒಂದು ಪಟ್ಟಣದ ಹೆಸರು, ಇದು ರಾಬಿಗ್‌ನಂದ ದಕ್ಷಿಣಕ್ಕೆ ಕೆಲವು ಮೈಲುಗಳಷ್ಟು ದೂರದಲ್ಲಿದೆ. ಪ್ರಸಿದ್ಧ ವಿಗ್ರಹವಾದ ಮನ್ನವನ್ನು ಇಲ್ಲಿಯೇ ಸ್ಥಾಪಿಸಲಾಗಿದೆ. ಮದೀನದ ಜನರು ಆತನನ್ನು ಆರಾಧಿಸುತ್ತಿದ್ದರು. (ಅಲ್-ರಾವ್ದ್ ಅಲ್-ಅನ್ಫ್, ಸಂಪುಟ-2, ಪುಟ-325, ದಾರುಲ್ ಕುತುನ್ ಇಲ್ಮಿಯ ಬೈರೂತ್) (ಫರ್ಹಂಗ್ ಸೀರತ್, ಪುಟ-232)

ಉಮ್ಮೇ ಮಅ್ಬದ್ ಒಬ್ಬ ಧೈರ್ಯಶಾಲಿ ಮತ್ತು ಬಲಿಷ್ಠ ಮಹಿಳೆಯಾಗಿದ್ದಳು. ಅವಳು ಯಾತ್ರಿಕರಿಗೆ ಊಟ ಬಡಿಸುವ ಮಹಿಳೆಯಾಗಿದ್ದಳು. ಪ್ರವಾದಿ(ಸ) ಮತ್ತು ಅವರ ಸಹಾಬರವರು ಅವಳಲ್ಲಿ ಮಾಂಸ ಮತ್ತು ಖರ್ಜೂರದ ಬಗ್ಗೆ ಕೇಳಿದರು, ಹೀಗೆ ಅವರು ಅವಳಿಂದ ಖರೀದಿಸಬಹುದು ಎಂದು, ಆದರೆ ಅವಳ ಬಳಿ ಅವುಗಳಲ್ಲಿ ಯಾವುದೂ ಇರಲಿಲ್ಲ. ಆ ಸಮಯದಲ್ಲಿ ಉಮ್ಮೇ ಮಅ್ಬದ್‌ನ ಜನರು ಬರಗಾಲಕ್ಕೆ ತುತ್ತಾಗಿದ್ದರು. ಉಮ್ಮೇ ಮಅ್ಬದ್ ಹೇಳಿದರು: "ನಮ್ಮಲ್ಲಿ ಏನಾದರೂ ಇರುತ್ತಿದ್ದರೆ, ನಾವು ಅದನ್ನು ನಿಮ್ಮಿಂದ ದೂರ ಇಡುತ್ತಿರಲಿಲ್ಲ." ಪ್ರವಾದಿ(ಸ) ಡೇರೆಯ ಒಂದು ಮೂಲೆಯಲ್ಲಿ ಮೇಕೆಯನ್ನು ಕಂಡಾಗ ಕೇಳಿದರು: ಓ ಉಮ್ಮೇ ಮಅ್ಬದ್! ಇದು ಹೇಗಿದೆ? ಅದಕ್ಕೆ ಅವಳು ಹೇಳಿದಳು: ಈ ಮೇಕೆಯು ದುರ್ಬಲವಾಗಿದ್ದರಿಂದ ಮೇಕೆ ಹಿಂಡಿನಿಂದ ಹಿಂದೆಯೇ ಉಳಿದಿದೆ. ಅಂದರೆ, ಹಿಂಡಿನೊಂದಿಗೆ ಹೊರಹೋಗುವ ಶಕ್ತಿ ಅದಕ್ಕಿಲ್ಲ. ಪ್ರವಾದಿ(ಸ) ಹೇಳಿದರು: ಅದರಲ್ಲಿ ಹಾಲು ಇದೆಯೇ? ಅವರು ಹೇಳಿದರು: ಇದು ಹೆಚ್ಚು ದುರ್ಬಲವಾಗಿದೆ. ಅದರಲ್ಲಿ ಹಾಲು ಇರಲು ಸಾಧ್ಯವಿಲ್ಲ. ಪ್ರವಾದಿ(ಸ) ಕೇಳಿದರು, ನೀವು ನನಗೆ ಅದರ ಹಾಲು ತೆಗೆದುಕೊಳ್ಳಲು ಅನುಮತಿ ನೀಡುತ್ತೀರಾ? ನೀವು ಅದರಲ್ಲಿ ಹಾಲು ಕಂಡರೆ ಅವಶ್ಯವಾಗಿ ತೆಗೆದುಕೊಳ್ಳಿ ನಾನು ಅನುಮತಿ ನೀಡುತ್ತೇನೆ ನನಗೆ ಯಾವ ಅಭ್ಯಂತರವಿಲ್ಲ. ಅದಕ್ಕೆ ಪ್ರವಾದಿ(ಸ) ಮೇಕೆಯನ್ನು ಕರೆದು ಅದರ ಮೊಲೆತೊಟ್ಟುಗಳನ್ನು ಮುಟ್ಟಿದರು ಮತ್ತು ಸರ್ವಶಕ್ತನಾದ ಅಲ್ಲಾಹನ ಹೆಸರನ್ನು ತೆಗೆದುಕೊಂಡು ಉಮ್ಮೇ ಮಅ್ಬದ್ ಅವರ ಮೇಕೆಯಲ್ಲಿ ಅನುಗ್ರಹಕ್ಕಾಗಿ ಪ್ರಾರ್ಥಿಸಿದರು. ಮೇಕೆ ನಿಮ್ಮ ಮುಂದೆ ಆರಾಮವಾಗಿ ನಿಂತಿತು ಮತ್ತು ಅವರು ಬಹಳಷ್ಟು ಹಾಲು ಹಿಂಡಿ ತೆಗೆದರು. ನಂತರ ಅವರು ಒಂದು ಪಾತ್ರೆಯನ್ನು ತರೆಸಿ ಅದರಲ್ಲಿ ಸಂಪೂರ್ಣ ಸಂಘಕ್ಕೆ ಸಾಕಾದಷ್ಟು ಹಾಲನ್ನು ತುಂಬಿದರು. ಅದರಲ್ಲಿ ತುಂಬಾ ಹಾಲು ಇತ್ತು, ಅದರ ಮೇಲೆ ನೊರೆ ಬಂದಿತು. ನಂತರ ಅವರು ಉಮ್ಮೇ ಮಅ್ಬದ್‌ಗೆ ಸಾಕಾದಷ್ಟು ಕುಟಿಸಿದರು. ನಂತರ ಅವರು ತಮ್ಮ ಸಂಗಡಿಗರು ಸಹ ತೃಪ್ತಿಯಾಗುವವರೆಗೂ ಕುಡಿದರು. ಕೊನೆಯಲ್ಲಿ ಅವರು ತಾನೇ ಕುಡಿದ ನಂತರ ಹೇಳಿದರು: ಜನಾಂಗಕ್ಕೆ ಕುಡಿಸುವನು ಕೊನೆಯಲ್ಲಿ ಕುಡಿಯುತ್ತಾನೆ. ನಂತರ ಸ್ವಲ್ಪ ಹೊತ್ತಿನ ನಂತರ ಮತ್ತೆ ಪಾತ್ರೆ ತುಂಬುವವರೆಗೆ ಹಾಲನ್ನು ತೆಗೆದು ಆ ಮೇಕೆಯನ್ನು ಉಮ್ಮೇ ಮಅ್ಬದ್‌ನ ಬಳಿ ಬಿಟ್ಟರು. ನಂತರ ಅವರು ಆ ಮೇಕೆಯನ್ನು ಖರೀದಿಸಿ ಪ್ರಯಾಣಕ್ಕೆ ಹೊರಟರು. (ಸಬಲ್ ಅಲ್-ಹುದಾ ವಲ್ ರಶಾದ್, ಸಂಪುಟ-3, ಪುಟಗಳು-244-245, ದಾರ್ ಅಲ್-ಕಿತಾಬ್ ಅಲ್-ಅಲಮಿಯಾ ಬೈರುತ್ 1993)

ಒಂದು ಕಡೆ ಪವಿತ್ರ ಪ್ರವಾದಿ(ಸ) ಮತ್ತು ಅವರ ನಿಷ್ಠಾವಂತ ಸಹಾಬರರಾದ ಹಝ್ರತ್ ಅಬುಬಕರ್(ರ) ಅವರು ದೇವದೂತರ ಉಪಸ್ಥಿತಿಯಲ್ಲಿ ದೈವಿಕ ಬೆಂಬಲ ಮತ್ತು ಸಹಾಯದೊಂದಿಗೆ ಪ್ರಯಾಣಿಸುತ್ತಿದ್ದರು ಅದೇ ರೀತಿ ಮತ್ತೊಂದೆಡೆ ಮಕ್ಕಾದ ಜನರು ಸೋಲನ್ನು ಒಪ್ಪಿರಲಿಲ್ಲ ಎಂದು ಬರೆಯಲಾಗಿದೆ.

ಅವರೂ ನಿಮ್ಮನ್ನು ನಿರಂತರವಾಗಿ ಹಿಂಬಾಲಿಸುತ್ತಿದ್ದರು. ಆದ್ದರಿಂದ ಹಿಂಬಾಲಿಸುವ ಖುರೈಷಿಗಳ ಒಂದು ಗುಂಪು ಪ್ರವಾದಿ(ಸ) ಅವರನ್ನು ಹುಡುಕುತ್ತಿರುವಾಗ, ಉಮ್ಮೇ ಮಅ್ಬದ್ ಅವರ ಡೇರೆಯನ್ನು ತಲುಪಿತು ಮತ್ತು ಅವರು ತಮ್ಮ ಕುದುರೆಗಳಿಂದ ಇಳಿದ ತಕ್ಷಣ, ಅವರು ಪ್ರವಾದಿ(ಸ) ಬಗ್ಗೆ ಕೇಳಲು ಪ್ರಾರಂಭಿಸಿದರು. ಉಮ್ಮೇ ಮಅ್ಬದ್‌ರವರು ಆ ಸಂಗತಿಯನ್ನು ಗಮನಿಸಿ, ನಾನು ಕೇಳದ ಮತ್ತು ನನಗೆ ಅರ್ಥವಾಗದಂತಹ ವಿಷಯವನ್ನು ನೀವು ಕೇಳುತ್ತಿದ್ದೀರಿ ಎಂದು ಹೇಳಿದರು ಮತ್ತು ಅವರು ತಮ್ಮ ಪ್ರಶ್ನೆಯಲ್ಲಿ ಕಟ್ಟುನಿಟ್ಟಾಗಿರಲು ಬಯಸಿದಾಗ, ಈ ಧೈರ್ಯಶಾಲಿ ಮಹಿಳೆ ಹೇಳಿದಳು! ನೀವು ಇನ್ನೂ ನನ್ನನ್ನು ಬಿಟ್ಟು ಹೋಗದಿದ್ದರೆ, ನಾನು ನನ್ನ ಗೋತ್ರದವರನ್ನು ಕರೆಯುತ್ತೇನೆ. ಆ ಮಹಿಳೆಯ ಸ್ಥಾನಮಾನ ಅವನಿಗೆ ಗೊತ್ತಿತ್ತು. ಆದ್ದರಿಂದ ಸುರಕ್ಷಿತವಾಗಿರಲು ಒಂದೇ ಮಾರ್ಗವೆಂದರೆ ಹಿಂತಿರುಗುವುದು. (ಮುಹಮ್ಮದ್ ರಸೂಲುಲ್ಲಾಹ್ ವಲ್ಲಝೀನ ಮಅಹು........., ಅಬ್ದುಲ್ ಹಮೀದ್ ಜುದೇಹ್ ಅಲ್-ಸಹರ್, ಸಂಪುಟ-3, ಪುಟ-67, ಮಕ್ತಬ ಮಿಸರ್)

ಮುಸಲ್ಮಾನರ ಕಾರವಾನ್‌ನೊಂದಿಗೆ ಸಿರಿಯಾದಿಂದ ಹಿಂದಿರುಗುತ್ತಿದ್ದ ಹಝ್ರತ್ ಜುಬೈರ್(ರ) ಅವರನ್ನು ಭೇಟಿಯಾದಾಗ ಪ್ರವಾದಿ(ಸ)

ದಾರಿಯಲ್ಲಿ ಹೋಗುತ್ತಿದ್ದರು. ಹಝ್ರತ್ ಝುಬೈರ್(ರ) ಪ್ರವಾದಿ(ಸ) ಮತ್ತು ಹಝ್ರತ್ ಅಬೂಬಕರ್(ರ) ಅವರನ್ನು ಬಿಳಿ ಬಟ್ಟೆಗಳನ್ನು ಧರಿಸಿದರು. (ಸಾಹಿಹ್ ಅಲ್-ಬುಖಾರಿ, ಕಿತಾಬ್ ಅಲ್-ಮನಾಕಿಬ್, ಹದೀಸ್-3906)

ಈ ಭೇಟಿಯನ್ನು ಉಲ್ಲೇಖಿಸಿ, ಹಝ್ರತ್ ಮಿರ್ಜಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆದರು: ಮುಸಲ್ಮಾನರ ಕಾರವಾನ್‌ನೊಂದಿಗೆ ಸಿರಿಯಾದಿಂದ ಹಿಂದಿರುಗುತ್ತಿದ್ದ ಹಝ್ರತ್ ಜುಬೈರ್(ರ) ಅವರನ್ನು ಭೇಟಿಯಾದಾಗ ಪ್ರವಾದಿ(ಸ) ದಾರಿಯಲ್ಲಿ ಹೋಗುತ್ತಿದ್ದರು. ಹಝ್ರತ್ ಝುಬೈರ್(ರ) ಪ್ರವಾದಿ(ಸ) ಮತ್ತು ಹಝ್ರತ್ ಅಬೂಬಕರ್(ರ) ಅವರನ್ನು ಬಿಳಿ ಬಟ್ಟೆಗಳನ್ನು ಅರ್ಪಿಸಿ ಹೇಳಿದರು ನಾನು ಸಹ ಮಕ್ಕಕ್ಕೆ ಹೋಗಿ ಶೀಘ್ರವಾಗಿ ಹಿಂದಿರುಗಿ ಬಂದು ನಿಮ್ಮೊಂದಿಗೆ ಸೇರುತ್ತೇನೆ."
(ಸೀರತ್ ಖಾತಮನ್ನಬೀಈನ್, ಪುಟ-242)

ಹಝ್ರತ್ ಅಬೂಬಕರ್(ರ) ವ್ಯಾಪಾರಿಯಾದ ಕಾರಣದಿಂದ ಈ ಮಾರ್ಗವಾಗಿ ಬಂದುಹೋಗುತ್ತಿದ್ದರು. ಆದ್ದರಿಂದ ಹೆಚ್ಚಿನ ಜನರಿಗೆ ಅವರ ಪರಿಚಯವಿತ್ತು. ಆದರೆ ಜನರಿಗೆ ಹಝ್ರತ್ ಪೈಗಂಬರ್(ಸ)ರ ಪರಿಚಯವಿರಲಿಲ್ಲ. ಆದ್ದರಿಂದ ನಿಮ್ಮ ಮುಂದೆ ಮುಂದೆಯಾಗಿ ಇರುವುದು ಯಾರೆಂದು ಜನರು ಅಬೂಬಕರ್(ರ)ರೊಡನೆ ಕೇಳುತ್ತಿದ್ದರು. ಹಝ್ರತ್ ಅಬೂಬಕರ್(ರ) ಹೇಳುತ್ತಿದ್ದರು: **ಹಾಧಾ ಯಹ್‌ದೀನಿಯಸ್ಸಬೀಲ**. 'ಇವರು ನನ್ನ ಮಾರ್ಗದರ್ಶಕ.' ರಸ್ತೆಯನ್ನು ತೋರಿಸಿಲಿಕ್ಕಾಗಿ ಹಝ್ರತ್ ಅಬೂಬಕರ್(ರ) ತನ್ನ ಜೊತೆಗೆ ಇರಿಸಿದ ದಾರಿತೋರುಗನಾಗಿರಬೇಕು ಎಂದು ಜನರು ಭಾವಿಸುತ್ತಿದ್ದರು. ಆದರೆ ಹಝ್ರತ್ ಅಬೂಬಕರ್(ರ)ರ ಉದ್ದೇಶಿಸಿದ್ದ ಅರ್ಥ ಬೇರೆಯೇ ಆಗಿತ್ತು. (ಸಹೀಹ್ ಬುಖಾರಿ, ಕಿತಾಬ್ ಮನಾಖಿಬುಲ್ ಅನ್ಸಾರ್, ಹದೀಸ್-3911)

ಇದರ ಬಗ್ಗೆ ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಹಝ್ರತ್ ಅಬೂಬಕರ್(ರ) ವ್ಯಾಪಾರಿಯಾದ ಕಾರಣದಿಂದ ಈ ಮಾರ್ಗವಾಗಿ ಬಂದುಹೋಗುತ್ತಿದ್ದರು. ಆದ್ದರಿಂದ ಹೆಚ್ಚಿನ ಜನರಿಗೆ ಅವರ ಪರಿಚಯವಿತ್ತು. ಆದರೆ ಜನರಿಗೆ ಹಝ್ರತ್ ಪೈಗಂಬರ್(ಸ)ರ ಪರಿಚಯವಿರಲಿಲ್ಲ. ಆದ್ದರಿಂದ ನಿಮ್ಮ ಮುಂದೆ ಮುಂದೆಯಾಗಿ ಇರುವುದು ಯಾರೆಂದು ಜನರು ಅಬೂಬಕರ್(ರ)ರೊಡನೆ ಕೇಳುತ್ತಿದ್ದರು. ಹಝ್ರತ್ ಅಬೂಬಕರ್(ರ) ಹೇಳುತ್ತಿದ್ದರು: **ಹಾಧಾ ಯಹ್‌ದೀನಿಯಸ್ಸಬೀಲ**. 'ಇವರು ನನ್ನ ಮಾರ್ಗದರ್ಶಕ.' ರಸ್ತೆಯನ್ನು ತೋರಿಸಿಲಿಕ್ಕಾಗಿ ಹಝ್ರತ್ ಅಬೂಬಕರ್(ರ) ತನ್ನ ಜೊತೆಗೆ ಇರಿಸಿದ ದಾರಿತೋರುಗನಾಗಿರಬೇಕು ಎಂದು ಜನರು ಭಾವಿಸುತ್ತಿದ್ದರು. ಆದರೆ ಹಝ್ರತ್ ಅಬೂಬಕರ್(ರ)ರ ಉದ್ದೇಶಿಸಿದ್ದ ಅರ್ಥ ಬೇರೆಯೇ ಆಗಿತ್ತು. (ಸೀರತ್ ಖಾತಮನ್ನಬೀಈನ್, ಪುಟ-242)

8 ದಿನಗಳ ಯಾತ್ರೆಯನ್ನು ಮಾಡಿ ದೈವಿಕ ಸಹಾಯದೊಂದಿಗೆ ಕೊನೆಗೆ ಸೋಮವಾರದಂದು ಹಝ್ರತ್ ಪೈಗಂಬರ್(ಸ) ಖುಬಾ ತಲುಪಿದರು. ಹದೀಸ್‌ಗಳಲ್ಲಿ ಹೀಗೆ ಬಂದಿದೆ: ಸೋಮವಾರದಂದು ಹಝ್ರತ್ ಪೈಗಂಬರ್(ಸ) ಜನಿಸಿದ್ದರು. ಸೋಮವಾರದಂದೇ ಅವರು ಮಕ್ಕದಿಂದ ಹೊರಟರು. ಸೋಮವಾರದಂದೇ ಮದೀನ ತಲುಪಿದ್ದರು.
(ಸಬ್ಲುಲ್ ಹುದಾವರ್‌ರ್ರಶ್ಶಾದ್, ಸಂಪುಟ-3, ಪುಟ-253, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993) (ಸೀರತ್ ಖಾತಮನ್ನಬೀಈನ್, ಪುಟ-243)

ಖುಬಾ ಎಂಬುದು ಒಂದು ಬಾವಿಯ ಹೆಸರಾಗಿದ್ದು, ಇದರಿಂದ ಪಟ್ಟಣದ ಹೆಸರು ಖುಬಾ ಎಂದು ಕರೆಯಲ್ಪಟ್ಟಿತು, ಅಲ್ಲಿ ಅನ್ಸಾರ್‌ನ ಬನು ಅಮ್ರ್ ಬಿನ್ ಔಫ್ ಬುಡಕಟ್ಟಿನ ಜನರು ವಾಸಿಸುತ್ತಿದ್ದರು. ಈ ಪಟ್ಟಣವು ಮದೀನಾದಿಂದ ಎರಡು ಮೈಲಿ ದೂರದಲ್ಲಿತ್ತು.
(ಮುಜಮುಲ್ ಬಲದಾನ್ ಲಿಶ್ಶಹಾಬುದ್ದೀನ್, ಸಂಪುಟ-4, ಪುಟ-377, ಮಕ್ತಬ ಅಲಅಸರಿಯ್ಯ ಬೈರೂತ್ 2014)

ಕೆಲವರ ಪ್ರಕಾರ ಖುಬಾದ ದೂರವು ಮದೀನಾದಿಂದ ಮೂರು ಮೈಲಿಗಳಷ್ಟಿತ್ತು. ಇದನ್ನು ಆಲಿಯಾ ಎಂದೂ ಕರೆಯುತ್ತಾರೆ. (ಫರ್ಹಾಂಗ್ ಸಿರಾ, ಪುಟ 230)

ಮದೀನಾದಲ್ಲಿ, ಮುಸ್ಲಿಮರು ಮಕ್ಕಾದಿಂದ ಪ್ರವಾದಿ(ಸ) ನಿರ್ಗಮಿಸುವ ಬಗ್ಗೆ ಕೇಳಿದ್ದರು. ಅವರು ಪ್ರತಿದಿನ ಬೆಳಿಗ್ಗೆ ಹರಗೆ ಹೋಗಿ ಪ್ರವಾದಿ(ಸ) ಅವರಿಗಾಗಿ ಕಾಯುತ್ತಿದ್ದರು. ಮದೀನಾ ಎರಡು ಹರ್ರಗಳ ನಡುವೆ ಇದೆ. ಹರ್ರ ಸಯ್ಯಾಹ್‌ವನ್ನು ಕಪ್ಪು ಕಲ್ಲಿನ ಭೂಮಿ ಎಂದು ಕರೆಯಲಾಗುತ್ತದೆ. ಮದೀನದ ಪೂರ್ವಕ್ಕೆ ಹರ್-ಎ-ವಾಕಿಮ್, ಇದನ್ನು ಹರ್-ಎ-ಬಾನು ಖುರೈಜಾ ಎಂದೂ ಕರೆಯುತ್ತಾರೆ, ಮತ್ತು ಇನ್ನೊಂದು ಮದೀನಾದಿಂದ ಪಶ್ಚಿಮಕ್ಕೆ ಮೂರು ಮೈಲುಗಳಷ್ಟು ದೂರದಲ್ಲಿರುವ ಹರ್-ಉಲ್-ಉಬುರ್ರ. ಮಧ್ಯಾಹ್ನದ ಬಿಸಿಯೂ ಅವರನ್ನು ಮರಳಿ ಕರೆತರುತ್ತಿತ್ತು. ಬೆಳಗ್ಗೆ ಹೋಗಿ ಕಾದು ಮಧ್ಯಾಹ್ನಕ್ಕೆ ಬರುತ್ತಿದ್ದೆವು. ಒಂದು ದಿನ ಮದೀನದ ಆ ಜನರು ದೀರ್ಘ ಕಾಯುವಿಕೆಯ ನಂತರ ಹಿಂತಿರುಗಿದರು. ನಂತರ ಅವರು ತಮ್ಮ ಮನೆಗಳನ್ನು ತಲುಪಿದಾಗ, ಒಬ್ಬ ಯಹೂದಿ ಯಾವುದೋ ಕೆಲಸಕ್ಕಾಗಿ ತನ್ನ ಕೋಟೆಗಳಲ್ಲಿ ಒಂದನ್ನು ಹತ್ತಿದನು, ಆಗ ಅವನು ಪ್ರವಾದಿ(ಸ) ಮತ್ತು ಅವರ ಸಂಗಡಿಗರನ್ನು ಬಿಳಿ ಬಟ್ಟೆಯಲ್ಲಿ ನೋಡಿದನು. ಮರೀಚಿಕೆ ಅವರಿಂದ ದೂರ ಸರಿಯುತ್ತಿತ್ತು. ಯಹೂದಿ ತನ್ನನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ ಮತ್ತು ತನ್ನ ದೊಡ್ಡ ಧ್ವನಿಯಲ್ಲಿ ಹೇಳಿದನು. ಓ ಅರೇಬಿಯಾದ ಜನರೇ! ಇವರೇ ನೀವು ಕಾಯುತ್ತಿರುವ ನಾಯಕರು, ಆದ್ದರಿಂದ ಮುಸ್ಲಿಮರು ತಮ್ಮ ಆಯುಧಗಳಿಗೆ ಅಂಟಿಕೊಂಡರು ಮತ್ತು ಹರ್ರಾ ಕ್ಷೇತ್ರದಲ್ಲಿ ರಸೂಲುಲ್ಲಾಹ್(ಸ) ಅವರನ್ನು ಭೇಟಿಯಾದರು. ಬನು ಅಮ್ರ್ ಇಬ್ನ್ ಔಫ್ ಅವರ ನೆರೆಹೊರೆಯಲ್ಲಿ ಅವರೊಂದಿಗೆ ಇಳಿಯುವವರೆಗೂ ಪ್ರವಾದಿ (ಸ) ಅವರೊಂದಿಗೆ ಬಲಕ್ಕೆ ತಿರುಗಿದರು. ಹಝ್ರತ್ ಅಬೂಬಕರ್(ರ) ಜನರ ಪರವಾಗಿ ನಿಂತರು ಮತ್ತು ಪ್ರವಾದಿ(ಸ) ಶಾಂತವಾಗಿ ಕುಳಿತಿದ್ದರು ಮತ್ತು ಪ್ರವಾದಿ(ಸ) ರನ್ನು ನೋಡದ ಅನ್ಸಾರ್‌ಗಳು ಬಂದು ಹಝ್ರತ್ ಅಬೂಬಕರ್(ರ) ಅವರನ್ನು ಸ್ವಾಗತಿಸಲು ಪ್ರಾರಂಭಿಸಿದರು. ಸೂರ್ಯನ ಕಿರಣಗಳು ಪ್ರವಾದಿ(ಸ) ಮೇಲೆ ಬೀಳಲು ಪ್ರಾರಂಭಿಸಿತು. ಹಝ್ರತ್ ಅಬೂಬಕರ್(ರ) ಅವರು ಮುಂದೆ ಬಂದು ಪ್ರವಾದಿಯನ್ನು ತಮ್ಮ ಚಾದರ್‌ನಿಂದ ಮುಚ್ಚಿದರು. ಆ ಸಮಯದಲ್ಲಿ ಜನರು ಪ್ರವಾದಿ(ಸ) ಅವರನ್ನು ಗುರುತಿಸಿದರು ಮತ್ತು ಪ್ರವಾದಿ(ಸ) ಅವರು ಬನು ಅಮ್ರ್ ಇಬ್ನ್ ಔಫ್ ಅವರ ನೆರೆಹೊರೆಯಲ್ಲಿ ಹತ್ತು ರಾತ್ರಿಗಳು ಅಥವಾ ಬುಖಾರಿಯ ವರದಿಯ ಪ್ರಕಾರ ಹದಿನಾಲ್ಕು ರಾತ್ರಿಗಳಿಗಿಂತ ಹೆಚ್ಚು ಕಾಲ ಇದ್ದರು. ಮತ್ತು ಮಸೀದಿಯ ಅಡಿಪಾಯವನ್ನು ತಖ್ವದ(ಭಯಭಕ್ತಿಯ) ಮೇಲೆ ಇರಿಸಲಾಯಿತು ಮತ್ತು ಪ್ರವಾದಿ(ಸಲ್ಲಲ್ಲಾಹು ಅಲೈಹಿವಸಲ್ಲಮರು) ಅದರಲ್ಲಿ ನಮಾಝ್ ನಿರ್ವಹಿಸಿದರು.
(ಸಹೀಹ್ ಬುಖಾರಿ ಕಿತಾಬ್ ಮನಾಖಿಬುಲ್ ಅನ್ಸಾರ್, ಹದೀಸ್-3906) (ಸಹೀಹ್ ಬುಖಾರಿ ಕಿತಾಬುಸ್ಸಲಾತ್, ಹದೀಸ್-428) (ಫರ್ಹಾಂಗ್ ಸೀರತ್, ಪುಟಗಳು 101-102)

ಬುಖಾರಿಯವರ ಈ ವರದಿಯ ಪ್ರಕಾರ, ಪವಿತ್ರ ಪ್ರವಾದಿ(ಸ) ಹತ್ತು ರಾತ್ರಿಗಳಿಗಿಂತ ಹೆಚ್ಚು ಕಾಲ ಖುಬಾದಲ್ಲಿ ತಂಗಿದ್ದರು.

ಒಂದು ವರದಿಯ ಪ್ರಕಾರ, ಪ್ರವಾದಿ(ಸ) ಬನು ಅಮ್ರ್ ಇಬ್ನ್ ಔಫ್‌ನಲ್ಲಿ ಅಂದರೆ ಸೋಮವಾರ, ಮಂಗಳವಾರ, ಬುಧವಾರ ಮತ್ತು ಗುರುವಾರ ನಾಲ್ಕು ದಿನಗಳ ಕಾಲ ಖುಬಾದಲ್ಲಿ ತಂಗಿದರು ಮತ್ತು ಶುಕ್ರವಾರ ಮದೀನಾಕ್ಕೆ ತೆರಳಿದರು. ಇನ್ನೊಂದು ವರದಿಯಲ್ಲಿ 22 ರಾತ್ರಿಗಳ ಕಾಲ ಇದ್ದರು ಎಂದು ಉಲ್ಲೇಖಿಸುತ್ತದೆ. (ಅಲ್-ಸಿರತ್ ಅಲ್-ಹಲಾಬಿಯಾಹ್, ಸಂಪುಟ-2, ಪುಟ-75, ದಾರ್ ಅಲ್-ಕಿತಾಬ್ ಅಲ್-ಅಲಮಿಯಾ, ಬೈರುತ್, 2002)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಆ ಸಂಘವು ಮುಹಮ್ಮದ್(ಸ)ರದ್ದಾಗಿದೆ ಎಂದು ಹಝ್ರತ್ ಪೈಗಂಬರ್(ಸ)ರ ಒಂಟೆಗಳು ಬರುವುದಾಗಿ ನೋಡಿದ ಯಹೂದಿಗೆ ಗೊತ್ತಾಯಿತು. ಇದರ ಬಗ್ಗೆ ಅವನು ಗ್ರಾಮವಾಸಿಗಳ ಮುಂದೆ ಘೋಷಣೆ ಕೂಗಿದಾಗ ಮದೀನದ ಪ್ರತಿಯೊಬ್ಬ ವ್ಯಕ್ತಿ ಖುಬಾದ ಕಡೆಗೆ ಓಡುತ್ತಾ ಹೋದನು. ಮದೀನದ ಹೆಚ್ಚಿನವರಿಗೆ ಹಝ್ರತ್ ಪೈಗಂಬರ್(ಸ)ರ ಮುಖ ಪರಿಚಯವಿರಲಿಲ್ಲ. ಖುಬಾದ ಹೊರಗೆ ಹಝ್ರತ್ ಪೈಗಂಬರ್(ಸ) ಒಂದು ಮರದ ಕೆಳಗೆ ಕುಳಿತಿದ್ದಾಗ, ಜನರು ಓಡುತ್ತಾ ಮದೀನದಿಂದ ಹಝ್ರತ್ ಪೈಗಂಬರ್(ಸ)ರ ಕಡೆಗೆ ಬರುತ್ತಿದ್ದರು. ಹಝ್ರತ್ ಪೈಗಂಬರ್(ಸ) ಬಹಳ ಸರಳತೆಯಿಂದ ಕುಳಿತುಕೊಂಡಿದ್ದರು. ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರಿಗಿಂತ ಕಿರಿ ವಯಸ್ಸಿನವರಾಗಿದ್ದರೂ ಅವರ ಗಡ್ಡದಲ್ಲಿ ಕೆಲವು ಬಿಳಿ ಕೂದಲುಗಳಿದ್ದುವು ಮತ್ತು ಅವರ ಉಡಿಗೆ ಹಝ್ರತ್ ಪೈಗಂಬರ್(ಸ)ರಿಗಿಂತ ಸ್ವಲ್ಪ ಉತ್ತಮವಾಗಿತ್ತು. ಆದ್ದರಿಂದ ಜನರಲ್ಲಿ ಅಪರಿಚಿತರಾಗಿದ್ದವರು ಹಝ್ರತ್ ಅಬೂಬಕರ್(ರ)ರನ್ನು ಹಝ್ರತ್ ಪೈಗಂಬರ್(ಸ) ಎಂದು ಭಾವಿಸಿ ಬಹಳ ಆದರಭಾವದಿಂದ ಹಝ್ರತ್ ಅಬೂಬಕರ್(ರ)ರಿಗೆ ಮುಖ ಮಾಡಿ ಕುಳಿತುಕೊಳ್ಳುತ್ತಿದ್ದರು. ಜನರು ತಪ್ಪಾಗಿ ತಿಳಿದುಕೊಳ್ಳುತ್ತಿದ್ದಾರೆ ಎಂದು ಇದನ್ನು ಕಂಡಾಗ ಹಝ್ರತ್ ಅಬೂಬಕರ್(ರ) ತಿಳಿದುಕೊಂಡರು. ಅವರು ತಕ್ಷಣವೇ ಚಾದರವನ್ನು ಹರಡಿ ಸೂರ್ಯನಿಗೆ ಅಡ್ಡವಾಗಿ ನಿಂತುಕೊಂಡರು ಮತ್ತು ಹೀಗೆ ಹೇಳಿದರು: ಯಾ ರಸೂಲ್ಲಾಹ್, ನಿಮಗೆ ಬಿಸಿಲು ತಗುಲುತ್ತಿದೆ. ನಾನು ನಿಮಗಾಗಿ ನೆರಳು ಮಾಡುತ್ತೇನೆ. ಹೀಗೆ ವಿವೇಕಯುತವಾಗಿ ಅವರು ಜನರ ತಪ್ಪನ್ನು ತಿದ್ದಿದರು. (ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ-20, ಪುಟ-226-227)

ಹಝ್ರತ್ ಅನಸ್ ಬಿನ್ ಮಾಲಿಕ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಆಗಮಿಸಿದಾಗ ನಮಗಾಗಿ ಮದೀನ ಬೆಳಗಿತು ಮತ್ತು ಹಝ್ರತ್ ಪೈಗಂಬರ್(ಸ) ನಿಧನರಾದಾಗ ಆ ದಿನದಷ್ಟು ಇರುಳಾಗಿ ಮದೀನ ಪಟ್ಟಣವನ್ನು ನಾವು ಎಂದಿಗೂ ಕಂಡಿಲ್ಲ. ಖುಬಾದ ಅನ್ಸಾರ್‌ಗಳು ಹಝ್ರತ್ ಪೈಗಂಬರ್(ಸ)ರನ್ನು ಅಭೂತಪೂರ್ವಕವಾಗಿ ಸ್ವಾಗತಿಸಿದರು. ಕುಲ್ಸುಮ್ ಬಿನ್ ಅಲ್‌ಹದಮ್‌ರ ಮನೆಯಲ್ಲಿ ಹಝ್ರತ್ ಪೈಗಂಬರ್(ಸ) ತಂಗಿದರು.

ಸಹೀಹ್ ಬುಖಾರಿಯಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಪೈಗಂಬರ್(ಸ) ಅಮ್ರ್ ಬಿನ್ ಔಫ್‌ರ ಮೊಹಲ್ಲದಲ್ಲಿ ಹತ್ತಕ್ಕಿಂತ ಹೆಚ್ಚು ರಾತ್ರಿಗಳು ತಂಗಿದರು. ವರದಿಯಲ್ಲಿ ಹೀಗೆ ವರದಿಯಾಗಿದೆ: ಬನೂ ಅಮ್ರ್ ಬಿನ್ ಔಫ್ ಗೋತ್ರಕ್ಕಾಗಿ ಹಝ್ರತ್ ಪೈಗಂಬರ್(ಸ) ಮಸೀದಿಯ ಬುನಾದಿ ಹಾಕಿದರು. ಹಝ್ರತ್ ಪೈಗಂಬರ್(ಸ) ಈ ಬುನಾದಿ ಹಾಕಿದಾಗ ಮೊತ್ತಮೊದಲಾಗಿ ಅವರು ಖಿಬ್ಲದ ಕಡೆ ಒಂದು ಅಡಿಗಲ್ಲನ್ನು ಇರಿಸಿದರು. ಅನಂತರ ಹಝ್ರತ್ ಅಬೂಬಕರ್(ರ) ಒಂದು ಕಲ್ಲನ್ನು ತಂದು ಇರಿಸಿದರು. ಹಝ್ರತ್ ಉಮರ್(ರ) ಒಂದು ಕಲ್ಲನ್ನು ತೆಗೆದುಕೊಂಡು ಬಂದು ಹಝ್ರತ್ ಅಬೂಬಕರ್(ರ) ಇರಿಸಿದ ಕಲ್ಲಿನ ಬಳಿ ಇರಿಸಿದರು. ಅನಂತರ ಎಲ್ಲರೂ ನಿರ್ಮಾಣದಲ್ಲಿ ನಿರತರಾದರು. ತಖ್ವದ ಬುನಾದಿಯ ಮೇಲೆ ಇರಿಸಲಾಗಿದ್ದ ಮಸೀದಿ ಇದೇ ಆಗಿದೆ ಎಂದು ಮಸ್ಜಿದ್ ಖುಬಾದ ಕುರಿತು ಪ್ರಸ್ತಾಪಿಸಲಾಗಿದೆ. ಹಝ್ರತ್ ಇಬ್ನು ಅಬ್ಬಾಸ್(ರ) ವರದಿ ಮಾಡುತ್ತಾರೆ: ಖುಬಾದ ಮಸೀದಿ ಸಮೇತ ಮದೀನದ ಎಲ್ಲ ಮಸೀದಿಗಳು ದೇವಭಕ್ತಿಯ ಬುನಾದಿಯ ಮೇಲೆಯೇ ನಿರ್ಮಿಸಿಲಾಗಿವೆ. ಆದರೆ ಯಾವುದರ ಬಗ್ಗೆ ಖುರ್‌ಆನಿನ ವಚನ ಅವತೀರ್ಣವಾಗಿದೆಯೋ ಅದು ಖುಬಾದ ಮಸೀದಿಯ ಕುರಿತೇ ಆಗಿದೆ. (ಸಹೀಹ್ ಬುಖಾರಿ ಕಿತಾಬುಸ್ಸಲಾತ್, ಹದೀಸ್-428)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಖುಬಾದಲ್ಲಿ ಹತ್ತು ದಿನಗಳಿಗಿಂತ ಹೆಚ್ಚು ತಂಗಿದ ನಂತರ ಜುಮಾದ ದಿನದಂದು ಹಝ್ರತ್ ಪೈಗಂಬರ್(ಸ) ಮದೀನದ ಒಳಗಿನ ಭಾಗಗಳ ಕಡೆಗೆ ರವಾನೆಯಾದರು. ಅನ್ಸಾರ್ ಮತ್ತು ಮುಹಾಜಿರರ ಒಂದು ದೊಡ್ಡ ಸಂಘ ಅವರೊಂದಿಗಿತ್ತು. ಹಝ್ರತ್ ಪೈಗಂಬರ್(ಸ) ಒಂದು ಒಂಟೆಯಲ್ಲಿ ಸವಾರರಾಗಿದ್ದರು ಮತ್ತು ಹಝ್ರತ್ ಅಬೂಬಕರ್(ರ) ಅವರ ಹಿಂದೆ ಇದ್ದರು. ಈ ಸಂಘವು ಮೆಲ್ಲಮೆಲ್ಲನೆ ಪಟ್ಟಣದ ಕಡೆಗೆ ಧಾವಿಸಲು ಶುರುವಾಯಿತು. ಮಾರ್ಗ ಮಧ್ಯೆ ಜುಮಾ ನಮಾಝಿನ ಸಮಯವಾಯಿತು. ಹಝ್ರತ್ ಪೈಗಂಬರ್(ಸ) ಬನೂ ಸಾಲಿಂ ಬಿನ್ ಔಫ್‌ನ ತಾಣದಲ್ಲಿ ನಿಂತು ಖುತ್ಬ ನೀಡಿದರು ಮತ್ತು ಜುಮಾದ ನಮಾಝ್ ನಿರ್ವಹಿಸಿದರು.

ಹಝ್ರತ್ ಪೈಗಂಬರ್(ಸ) ಯಾವನೇ ಮುಸ್ಲಿಮನ ಮನೆಯ ಸಮೀಪದಿಂದ ಸಾಗುವಾಗಲೂ ಅವನು ಪ್ರೇಮದ ಆವೇಶದಿಂದ ಹೀಗೆ ಹೇಳುತ್ತಿದ್ದನು: ಯಾ ರಸೂಲುಲ್ಲಾಹ್, ಈ ನಮ್ಮ ಮನೆ, ನಮ್ಮ ಸಂಪತ್ತು ಮತ್ತು ನಮ್ಮ ಜೀವ ಅರ್ಪಿಸುತ್ತೇವೆ. ನಮ್ಮ ಬಳಿ ನಿಮ್ಮ ಸಂರಕ್ಷಣೆಯ ಏರ್ಪಾಡೂ ಇದೆ. ನೀವು ನಮ್ಮ ಬಳಿಗೆ ಬನ್ನಿರಿ. ಹಝ್ರತ್ ಪೈಗಂಬರ್(ಸ) ಅವರಿಗಾಗಿ ಒಳಿತಿನ ದುಆ ಮಾಡಿಕೊಂಡು ಮುಂದಕ್ಕೆ ಸಾಗುತ್ತಿದ್ದರು. ಮುಸ್ಲಿಂ ಮಹಿಳೆಯರು ಮತ್ತು ಮಕ್ಕಳು ಆವೇಶದಿಂದ ತಮ್ಮ ಮನೆ ಮಾಳಿಗೆಗಳನ್ನು ಹತ್ತಿ ಸ್ವಾಗತ ಹಾಡುಗಳನ್ನು ಹಾಡುತ್ತಿದ್ದರು. ಮದೀನದ ಹಬ್ಶೀ ಗುಲಾಮನು ಹಝ್ರತ್ ಪೈಗಂಬರ್(ಸ)ರ ಆಗಮನದ ಸಂತೋಷದಲ್ಲಿ ಖಡ್ಗದಿಂದ ಕೌಶಲವನ್ನು ತೋರಿಸುತ್ತಾ ಸುತ್ತುತ್ತಿದ್ದನು.

ಹಝ್ರತ್ ಪೈಗಂಬರ್(ಸ) ಕೆಲವು ಕಾಲದ ನಂತರ ಹಝ್ರತ್ ಝೈದ್‌ರನ್ನು ಮಕ್ಕಕ್ಕೆ ಕಳುಹಿಸಿದರು. ಅವರು ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್(ರ)ರ ಕುಟುಂಬವನ್ನು ಕ್ಷೇಮವಾಗಿ ಮದೀನಕ್ಕೆ ತಲುಪಿಸಿದರು. ಮದೀನದಲ್ಲಿ ಹಝ್ರತ್ ಪೈಗಂಬರ್(ಸ) ಖರೀದಿ ಮಾಡಿದ ತುಂಡುಭೂಮಿಯಲ್ಲಿ ಮೊತ್ತಮೊದಲು ಮಸೀದಿಯ ಬುನಾದಿ ಹಾಕಿದರು. ಅನಂತರ ತನಗಾಗಿ ಮತ್ತು ತನ್ನ ಸಂಗಡಿಗರಿಗಾಗಿ ಮನೆಗಳನ್ನು ನಿರ್ಮಿಸಿದರು.

ಮದೀನ ಹಿಜ್ರತ್ ನಂತರ ಹಝ್ರತ್ ಅಬೂಬಕರ್(ರ) ಸುನಹ್‌ದಲ್ಲಿ ಖುಬೈಬ್ ಬಿನ್ ಅಸಾಫ್‌ರ ಬಳಿ ತಂಗಿದರು. ಸುನಹ್ ಎಂಬುದು ಮದೀನದ ಆಸುಪಾಸಿನ ಒಂದು ಜಾಗವಾಗಿದೆ. ಅದು ಮಸ್ಜಿದ್ ನಬವಿಯಿಂದ ಸುಮಾರು ಎರಡು ಮೈಲುಗಳ ದೂರದಲ್ಲಿತ್ತು. ಹಝ್ರತ್ ಖುಬೈಬ್‌ರ ಸಂಬಂಧ ಬನೂ ಹಾರಿಸ್ ಬಿನ್ ಖಝ್ರಜ್ ಕುಟುಂಬದೊಂದಿಗೆ ಆಗಿತ್ತು. ಒಂದು ಹೇಳಿಕೆಯ ಪ್ರಕಾರ ಹಝ್ರತ್ ಅಬೂಬಕರ್(ರ) ಹಝ್ರತ್ ಖಾರಿಜ ಬಿನ್ ಝೈದ್‌ರ ಬಳಿ ತಂಗಿದ್ದರು. ಕೆಲವು ವರದಿಗಳ ಪ್ರಕಾರ ಅವರು ಸುನಹ್‌ದಲ್ಲೇ ತನ್ನ ಮನೆ ಮತ್ತು ಬಟ್ಟೆ ತಯಾರಿಸುವ ಕಾರ್ಖಾನೆಯನ್ನು ಕಟ್ಟಿದ್ದರು. ಅದರಿಂದ ವ್ಯಾಪಾರವನ್ನು ಮಾಡಿದರು.

ಈ ಪ್ರಸ್ತಾಪ ಮುಂದುವರೆಯುವುದು.

ಈಗ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸುವೆನು. ಅವರಲ್ಲಿ ಮೊದಲನೆಯ ಪ್ರಸ್ತಾಪ ಬಹಾವಲ್‌ಪೂರಿನ ಸನ್ಮಾನ್ಯ ಮುಹಮ್ಮದ್ ಶರೀಫ್ ಕ್ಲಾರ್ ಸಾಹಿಬ್‌ರ ಪುತ್ರರಾದ ಸನ್ಮಾನ್ಯ ಚೌಧರಿ ಅಸ್ಗರ್ ಅಲಿ ಕ್ಲಾರ್ ಸಾಹಿಬ್. ದಿವಂಗತರು ಅಲ್ಲಾಹನ ಮಾರ್ಗದಲ್ಲಿ ಸೆರೆಯಾಳು ಆಗಿದ್ದರು. ದಿವಂಗತರು ಜನವರಿ 10ರಂದು ಸೆರೆಮನೆ ವಾಸದ ಕಾಲಾವಧಿಯಲ್ಲೇ ರೋಗಿಯಾಗಿ 70ನೇ ವಯಸ್ಸಿನಲ್ಲಿ ಆಸ್ಪತ್ರೆಯಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಈ ರೀತಿಯಾಗಿ ಇವರು ಹುತಾತ್ಮರಲ್ಲೇ ಸೇರ್ಪಡೆಯಾಗುವರು.

ಲಭಿಸಿದ ವಿವರ ಪ್ರಕಾರ ದಿವಂಗತರ ಮೇಲೆ ಸೆಪ್ಟೆಂಬರ್ 24ರಂದು ಬಗ್‌ದಾದುಲ್ ಜದೀದ್ ಬಹಾವಲ್‌ಪೂರ್ ಪೊಲೀಸ್ ಸ್ಟೇಶನಿನಲ್ಲಿ ಪ್ರವಾದಿ ನಿಂದೆಯ ಮೊಕದ್ದಮೆಯನ್ನು ಹಾಕಲಾಯಿತು ಮತ್ತು ಸೆಪ್ಟೆಂಬರ್ 26ರಂದು ಬಂಧಿಸಲಾಯಿತು. ಪ್ರವಾದಿ ನಿಂದೆಯ ಆಪಾದನೆ ಅಹ್ಮದಿಯರ ಮೇಲೆ ತಕ್ಷಣ ಹೊರಿಸುತ್ತಾರೆ. ಬಂಧನದ ನಂತರ ದಿವಂಗತರು ಬಹಾಉಲ್‌ಪುರ್ ಜೈಲಿನಲ್ಲಿದ್ದರು. ಜೈಲಿನಲ್ಲಿ ರಕ್ತದ ವಾಂತಿಯಾಗಿ ಆರೋಗ್ಯ ಕೆಟ್ಟಾಗ ದಿವಂಗತರನ್ನು ಜನವರಿ 4ರಂದು ಬಹಾವಲ್‌ಪುರ್ ಆಸ್ಪತ್ರೆಗೆ ದಾಖಲಿಸಲಾಯಿತು. ಅಲ್ಲಿ ಚಿಕಿತ್ಸೆ ನಡೆಯುತ್ತಿತ್ತು. ಜನವರಿ 10ರಂದು ಬೆಳಗ್ಗೆ ಫಜ್ರ್‌ಗೆ ಮುಂಚಿತವಾಗಿ ಸೆರೆಯ ಸ್ಥಿತಿಯಲ್ಲೇ 70ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**.

ದಿವಂಗತರ ಜಾಮೀನಿನ ಅರ್ಜಿ ಪೆಂಡಿಂಗ್‌ನಲ್ಲಿತ್ತು. ಜನವರಿ 8ರಂದು ಜಾಮೀನು ಬಿಡುಗಡೆಯ ದಿನಾಂಕವಾಗಿತ್ತು. ಆದರೆ ಪೊಲೀಸ್ ರಿಕಾರ್ಡ್ ತೆಗೆದುಕೊಂಡು ಬಂದಿರಲಿಲ್ಲ. ಆದ್ದರಿಂದ ಜನವರಿ 11 ತಾರೀಕನ್ನು ಅದಕ್ಕಾಗಿ ಜಡ್ಜ್ ನೀಡಿದರು. ಆದರೆ ತೀರ್ಪಿಗೆ ಮುಂಚಿತವಾಗಿಯೇ ಅವರು ನಿಧನರಾದರು. ದಿವಂಗತರು 3 ತಿಂಗಳು 15 ದಿನಗಳಷ್ಟು ಸೆರೆಮನೆಯಲ್ಲಿದ್ದರು.

ದಿವಂಗತರು 1971ರಲ್ಲಿ ಹತ್ತನೆ ತರಗತಿಯ ನಂತರ ಸ್ವತಃ ಬೈಅತ್ ಮಾಡಿ ಅಹ್ಮದಿಯ್ಯತ್ ಪ್ರವೇಶಿಸಿದ್ದರು. ದಿವಂಗತರು ತನ್ನ ಕುಟುಂಬದಲ್ಲಿ ಏಕ ಅಹ್ಮದಿಯಾಗಿದ್ದರು. ಅಹ್ಮದಿಯ್ಯತ್ತಿಗೆ ಪ್ರವೇಶಿಸಿದ ನಂತರ ವಿರೋಧದ ಸ್ಥಿತಿಯನ್ನು ಎದುರಿಸಬೇಕಾಗಿತ್ತು. ಆದರೂ ಸ್ಥಿರತೆಯಿಂದ ಇದ್ದರು. ಎಫ್.ಸಿ ಕಾಲೇಜಿನಿಂದ ಅವರು ಎಂ.ಎಸ್.ಸಿ. ಮ್ಯಾತ್‌ನಲ್ಲಿ ಡಿಗ್ರಿ ಪಡೆದರು. ಶಿಕ್ಷಣದ ವೇಳೆ ಅಹ್ಮದಿಯ್ಯತ್ ಸ್ವೀಕಾರದ ಕಾರಣದಿಂದ ಹೆತ್ತವರು ಧನಸಹಾಯ ಮಾಡುವುದನ್ನು ನಿಲ್ಲಿಸಿದರು. ಅಹ್ಮದಿಯ್ಯತ್ ಉಪೇಕ್ಷಿಸಿದರೆ ಮಾತ್ರ ಮುಂದೆ ಶೈಕ್ಷಣಿಕ ಖರ್ಚುಗಳನ್ನು ನೀಡುವುದಾಗಿ ನಿಬಂಧನೆ ಹಾಕಿದರು. ಆದರೂ ಅವರು ಸ್ಥೈರ್ಯದಿಂದ ಇದ್ದರು. ವಿದ್ಯಾರ್ಥಿಗಳಿಗೆ ಟ್ಯೂಶನ್ ನೀಡಿ ತನ್ನ ಶಿಕ್ಷಣದ ಖರ್ಚುಗಳನ್ನು ಈಡೇರಿಸಿದರು. ಕೊನೆಗೆ ದಿವಂಗತರ ತಂದೆಯು ದಿವಂಗತರ ಸ್ಥಿರಚಿತ್ತತೆ ಮತ್ತು ದೇವಭಕ್ತಿಯಿಂದ ಪ್ರಭಾವಿತರಾಗಿ ನಂತರ ವಿರೋಧವನ್ನು ತ್ಯಜಿಸಿದರು. ಅಹ್ಮದಿ ಮಗನನ್ನು ಅಹ್ಮದಿಯೇತರ ತಂದೆಯ ಸೊತ್ತಿನಿಂದ ವಂಚಿತಗೊಳಿಸದಿರಲಿ ಎಂಬ ಭಯದಿಂದ ತನ್ನ ಜೀವಿತದಲ್ಲೇ ತಂದೆ ಅದನ್ನು ಮಗನ ಹೆಸರಿಗೆ ಮಾಡಿಸಿದರು. ಹೀಗೊಂದು ಒಳಿತನ್ನು ತಂದೆ ಮಗನೊಂದಿಗೆ ಮಾಡಿದರು. ದಿವಂಗತರು 1/8 ಪಾಲಿನ ವಸಿಯ್ಯತ್ ಮಾಡಿದ್ದರು. ಸಾಂಪತ್ತಿಕ ಯೋಜನೆಗಳಲ್ಲಿ ಉತ್ಸಾಹದಿಂದ ಭಾಗಿಯಾಗುವವರಾಗಿದ್ದರು. ಹೊಸ ವರ್ಷದ ಘೋಷಣೆಯೊಂದಿಗೆ ಶೇಕಡ ನೂರರಷ್ಟು ಪಾವತಿ ಮಾಡುತ್ತಿದ್ದರು. ಅಹ್ಮದಿಯಾ ಖಿಲಾಫತಿನೊಂದಿಗೆ ಅಪರಿಮಿತವಾದ ಪ್ರೇಮವಿತ್ತು. ವಖ್ಫೇ ಝಿಂದಗಿ ಮತ್ತು ಕೇಂದ್ರ ಅತಿಥಿಗಳ ಗೌರವ ಹಾಗೂ ಅತಿಥಿ ಸತ್ಕಾರದ ಗುಣ ಬಹಳವಿತ್ತು. ಜಮಾಅತಿನ ಪರ್ಯಟನೆಗಳಲ್ಲಿ ತನ್ನ ವಾಹನವನ್ನು ನೀಡುತ್ತಿದ್ದರು. ತಬ್ಲೀಗ್ ಮಾಡಲು ಬಹಳ ಆಸಕ್ತಿ ಹೊಂದಿದ್ದರು. ಧೈರ್ಯವಂತ ದಾಇ ಇಲ್ಲಲ್ಲಾಹ್ ಆಗಿದ್ದರು. ಅನೇಕ ಭಾಗ್ಯಶಾಲಿಗಳಿಗೆ ಅವರ ಮೂಲಕ ಬೈಅತ್ ಮಾಡಿ ಅಹ್ಮದಿಯ್ಯತ್ ಸ್ವೀಕಾರದ ಸೌಭಾಗ್ಯವನ್ನು ಅಲ್ಲಾಹನು ನೀಡಿದ್ದನು. ಉಪವಾಸ ಮತ್ತು ಐದು ಹೊತ್ತಿನ ನಮಾಝ್ ಅಲ್ಲದೇ ತಹಜ್ಜುದ್ ನಿರ್ವಹಿಸುವವರಾಗಿದ್ದರು. ಬಡವರ ಸಹಾಯ ಮಾಡುವ ಮತ್ತು ಸೃಷ್ಟಿಗಳ ಸೇವೆ ಮಾಡುವ ಪರೋಪಕಾರಿ ವ್ಯಕ್ತಿಯಾಗಿದ್ದರು. ಕುಟುಂಬದ ಪ್ರತಿಯೊಬ್ಬರ ವಿರೋಧವಿದ್ದರೂ ಅವರಿಗೆ ಸಾಂಪತ್ತಿಕ ಮತ್ತಿತರ ಸಹಾಯವನ್ನು ಮಾಡುತ್ತಿದ್ದರು. ದಿವಂಗತರಿಗೆ ಶಹಾದತಿನ ಬಯಕೆ ತುಂಬಾ ಇತ್ತು. ಅದನ್ನು ಅಲ್ಲಾಹನು ಹೀಗೆ ಈಡೇರಿಸಿದನು.

ದಿವಂಗತರ ಪತ್ನಿ ಹೇಳುತ್ತಾರೆ: ಅಲ್ಲಾಹನ ಕಡೆಯಿಂದ ಮೂರು ಬಾರಿ ಸಲಾಮಿನ ಸಂದೇಶ ಲಭಿಸಿದೆ ಎಂದು ಜೈಲಿನಲ್ಲಿ ಭೇಟಿಯಾದಾಗ ನನ್ನೊಡನೆ ಹೇಳಿದರು. ಜೈಲಿನಿಂದ ಅವರ ಮೈಯತ್ ತೆಗೆಯಲಾಗುವುದನ್ನು

ಅವರು ಕನಸಿನಲ್ಲಿ ಕಂಡಿದ್ದರು ಎಂದೂ ಹೇಳಿದರು. ದಿವಂಗತರಿಗೆ ನಾಝಿಮ್ ಅನ್ಸಾರುಲ್ಲಾಹ್, ಬಹಾವಲ್‌ಪುರಿನ ಝಈಮ್ ಆಲ್ಲಾ, ಸೆಕ್ರಟರಿ ದಾವತೇ ಇಲಲ್ಲಾಹ್, ಸೆಕ್ರಟರಿ ವಖ್ಫೇ ಜದೀದ್, ಜಿಲ್ಲಾ ಸೆಕ್ರಟರಿ ಇಸ್ಲಾಹೋ ಇರ್ಶಾದ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. ನಿಧನದ ಸಮಯದಲ್ಲಿ ಅವರು ಜಿಲ್ಲಾ ಖಾಝಿ ಆಗಿದ್ದರು. ದಿವಂಗತರು ತನ್ನ ಪತ್ನಿಯನ್ನಲ್ಲದೆ ಇಬ್ಬರು ಪುತ್ರರನ್ನು ಮತ್ತು ಒಬ್ಬಳು ಪುತ್ರಿಯನ್ನು ಅಗಲಿರುವರು. ಒಬ್ಬ ಮಗನು ವಿದೇಶದಲ್ಲಿ ಇದ್ದಾನೆ, ಮಗಳು ಕೆನಡದಲ್ಲಿ. ಅಲ್ಲಾಹನು ಅಸ್ಗರ್ ಅಲಿ ಕ್ಲಾರ್ ಸಾಹಿಬ್‌ರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಪದವಿಗಳನ್ನು ಉನ್ನತಗೊಳಿಸಲಿ. ಅಗಲಿದವರಿಗೆ ಅತ್ಯುತ್ತಮ ಸಹನೆ ನೀಡಲಿ. ಅವರ ಹೆಜ್ಜೆಗುರುತುಗಳ ಮೇಲೆ ನಡೆಯಲು ಸೌಭಾಗ್ಯ ನೀಡಲಿ.

ಬಂಧಿಯಾಗಿರುವ ಇತರ ಸೆರೆಯಾಳುಗಳಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರ ಬಿಡುಗಡೆಯ ಏರ್ಪಾಡು ಮಾಡಲಿ.

ಎರಡನೆಯ ಪ್ರಸ್ತಾಪ ರಬ್ವದ ವಕಾಲತ್ ಉಲ್‌ಯದ ಉದ್ಯೋಗಿಯಾದ ಸನ್ಮಾನ್ಯ ಮಿರ್ಝಾ ಮುಬಶ್ಶಿರ್ ಅಹ್ಮದ್ ಸಾಹಿಬ್‌ರದ್ದಾಗಿದೆ. 85ನೇ ವಯಸ್ಸಿನಲ್ಲಿ ಅವರ ನಿಧನವಾಯಿತು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ಮಾಡಿದ್ದರು. ಅವರ ಕುಟುಂಬದಲ್ಲಿ ಅಹ್ಮದಿಯ್ಯತಿನ ಪ್ರವೇಶ ಅವರ ತಂದೆಯಾದ ಕ್ಯಾಪ್ಟನ್ ಡಾಕ್ಟರ್ ಶೇರ್ ಮುಹಮ್ಮದ್ ಆಲಿ ಸಾಹಿಬ್‌ರ ಮೂಲಕ ಉಂಟಾಯಿತು. ಅವರು 1923ರಲ್ಲಿ ಬೈಅತ್ ಮಾಡಿದ್ದರು. ಮಿರ್ಝಾ ಮುಬಶ್ಶಿರ್ ಸಾಹಿಬ್‌ರು 1964 ಎಪ್ರಿಲ್‌ನಲ್ಲಿ ತಹ್ರೀಕ್ ಜದೀದಿನ ಅಮಾನತ್ ಆಫೀಸಲ್ಲಿ ಸೇವೆ ಶುರುಮಾಡಿದ್ದರು. ಮರಣದ ವರೆಗೆ 58 ವರ್ಷಗಳ ಕಾಲ ಈ ಸೇವೆಯ ಸೌಭಾಗ್ಯವನ್ನು ಪಡೆದರು. ಅವರ ವಿವಾಹ ಸನ್ಮಾನ್ಯ ಚೌಧರಿ ಮುಝಫ್ಫರ್ ದೀನ್ ಬಂಗಾಯಿ ಸಾಹಿಬ್‌ರ ಮಗಳಾದ ಮಾಜಿದ ಬೇಗಮ್‌ರೊಂದಿಗೆ ನಡೆದಿತ್ತು. ಅವರಿಗೆ ಇಬ್ಬರು ಪುತ್ರರನ್ನು ಮತ್ತು ಒಬ್ಬಳು ಪುತ್ರಿಯನ್ನು ಅಲ್ಲಾಹನು ದಯಪಾಲಿಸಿದನು.

ಅವರ ಮೊಮ್ಮಗನಾದ ಖಾಲಿದ್ ಮನ್ಸೂರ್ ಬರೆಯುತ್ತಾರೆ: ಜಮಾಅತಿನ ಸೇವೆಯಲ್ಲಿ ಇರಲಿಕ್ಕಾಗಿ ಸದಾ ನಮ್ಮ ತಾತ ಹೇಳುತ್ತಿದ್ದರು. ಸದಾ ಜಮಾಅತಾದ ನಮಾಝಿನ ಪ್ರಾಮುಖ್ಯತೆ ಹೇಳಿಕೊಡುತ್ತಿದ್ದರು. ನನ್ನ ತಂದೆಯ ನಿಧನದ ನಂತರ ಅದರ ಕೊರತೆಯನ್ನು ಅನುಭವಿಸದಂತೆ ನನ್ನ ತಾತರು ನೋಡಿಕೊಂಡರು. ಸದಾ ಅವರನ್ನು ನನ್ನ ಸ್ನೇಹಿತನಾಗಿ ಕಂಡೆನು. ಸದಾ ಜಮಾಅತಿನ ಕೆಲಸಗಳಲ್ಲಿ ನಿರತರಾಗಿ ಕಂಡೆ. ಒಬ್ಬ ಮಾದರಿ ಸ್ನೇಹಿತ, ತಂದೆ ಮತ್ತು ಜಮಾಅತಿನ ಮಾದರಿ ಉದ್ಯೋಗಿಯಾಗಿದ್ದರು. ಪ್ರತಿಯೊಬ್ಬರೊಡನೆ ಪ್ರೀತಿ, ಪ್ರೇಮ ಮತ್ತು ವಾತ್ಸಲ್ಯದಿಂದ ವರ್ತಿಸುತ್ತಿದ್ದರು. ಸಮಯ ಪಾಲನೆ ಬಹಳ ಮಾಡುತ್ತಿದ್ದರು. ಅದರ ಪ್ರಾಮುಖ್ಯತೆಯನ್ನು ಹೇಳುತ್ತಿದ್ದರು. ಅವರೊಂದಿಗೆ ಕೆಲಸ ಮಾಡುವ ಒಬ್ಬ ಉದ್ಯೋಗಿಯಾದ ಸಈದ್ ನಾಸಿರ್ ಸಾಹಿಬ್ ಹೇಳುತ್ತಾರೆ: ಬಹಳ ದೀರ್ಘಕಾಲ ಅವರೊಂದಿಗೆ ಕೆಲಸ ಮಾಡುವ ಸಂದರ್ಭ ನನಗೆ ಸಿಕ್ಕಿತ್ತು. ಬಹಳ ಸ್ವಚ್ಛವಾಗಿ ಕೆಲಸ ಮಾಡುತ್ತಿದ್ದರು. ತನ್ನ ಕೆಲಸ ಮುಗಿಸಿದ ನಂತರ ತನ್ನ ಜೊತೆಗಾರರ ಕೆಲಸದಲ್ಲೂ ನೆರವಾಗುತ್ತಿದ್ದರು.

ಮುರಬ್ಬಿಯಾದ ಲುಖ್ಮಾನ್ ಸಾಖಿಬ್ ಸಾಹಿಬ್ ಹೇಳುತ್ತಾರೆ: ದುರ್ಬಲರಾದ ನಂತರವೂ ತನಗೆ ಒಪ್ಪಿಸಲಾದ ಕೆಲಸವನ್ನು ಬಹಳ ಉತ್ಸಾಹದಿಂದ ಉತ್ತಮವಾಗಿ ಮುಗಿಸುತ್ತಿದ್ದರು. ಕೊನೆಯ ಕಾಲದ ವರೆಗೂ ಅವರ ನೆನಪಿನ ಶಕ್ತಿ ಅದ್ಭುತವಾಗಿತ್ತು. ಬಹಳ ವರ್ಷಗಳಷ್ಟು ಹಳೆಯ ವಿಷಯಗಳ ಕುರಿತು ಕೂಡ ಈ ವಿಷಯದ ಬಗ್ಗೆ ಇಂತಿಂತಹ ಫೈಲಿನಲ್ಲಿ ಇಂತಿಂತಹ ಸ್ಥಳದಲ್ಲಿ ಇದೆ ಎಂದು ಹೇಳುತ್ತಿದ್ದರು. ಉತ್ತಮ ಹಾಸ್ಯವನ್ನು ಇಷ್ಟಪಡುತ್ತಿದ್ದರು ಮತ್ತು ಅದರಿಂದ ಆನಂದಗೊಳ್ಳುತ್ತಿದ್ದರು. ಆದರೆ ಅನಾವಶ್ಯಕವಾದ ಮಾತುಗಳನ್ನು ಹೇಳುವುದು ಮತ್ತು ಹರಟೆ ಹೊಡೆಯುವುದು ಅವರ ಸ್ವಭಾವವಾಗಿರಲಿಲ್ಲ. ತನ್ನ ಕೆಲಸವನ್ನು ಮುಗಿಸಿದ ನಂತರ ಬಾಕಿಯಾಗುವ ಸಮಯದಲ್ಲಿ ತನ್ನ ಕುರ್ಚಿಯಲ್ಲಿ ಕುಳಿತುಕೊಂಡು ಆಫೀಸಿನಲ್ಲೇ ಹಿಂದಿನ ಫೈಲುಗಳನ್ನು ಓದಲು ಶುರುಮಾಡುತ್ತಿದ್ದರು.

ಡಾಕ್ಟರ್ ಸುಲ್ತಾನ್ ಮುಬಶ್ಶಿರ್ ಸಾಹಿಬ್‌ರು ಅವರ ಬಗ್ಗೆ ಹೀಗೆ ಬರೆದಿರುವರು: ಅವರಲ್ಲಿ ಬಹಳ ವಿನಯವಂತಿಕೆಯಿತ್ತು. ಆಸ್ಪತ್ರೆಗೆ ಬರುವಾಗ ಒಬ್ಬ ಸೀನಿಯರ್ ಉದ್ಯೋಗಿಯಾಗಿದ್ದರೂ ತನ್ನ ಸರದಿಗಾಗಿ ಕಾಯುತ್ತಿದ್ದರು. ಎಂದಿಗೂ ಅವಸರಪಡುತ್ತಿರಲಿಲ್ಲ. ಕೃತಜ್ಞತೆ ಅರ್ಪಿಸುವ ಗುಣ ಅವರಲ್ಲಿ ಬಹಳವಿತ್ತು. ಸಹನೆಯ ಗುಣ ಅವರಲ್ಲಿ ಬಹಳವಿತ್ತು. ಬಹಳ ದೀರ್ಘ ಕಾಲದ ಕಾಯಿಲೆಯಿದ್ದರೂ ಅವರು ಎಂದಿಗೂ ಅಸಹನೆದೋರಿಸಲಿಲ್ಲ. ಅವರಿಗೆ ಹೆಚ್ಚು ಸ್ನೇಹಿತರು ಕೂಡ ಇದ್ದಿರಲಿಲ್ಲ. ಆಫೀಸಿನ ಕೆಲವು ಸ್ನೇಹಿತರಲ್ಲದೇ.

ಬಹಳ ಮೌನ ಪ್ರಕೃತದವರಾಗಿದ್ದರು. ತನ್ನ ಕೆಲವು ಸ್ನೇಹಿತರ ಜೊತೆಗೆ ಇರುವುದಾಗಿ ಸದಾ ನಾನು ನೋಡಿದ್ದೇನೆ. ಆಫೀಸಿನಿಂದ ಮನೆಗೆ ಮನೆಯಿಂದ ಆಫೀಸಿಗೆ ಅವರ ಮಾಮೂಲಾಗಿತ್ತು. ಆದರೆ ಬಹಳ ಪರಿಶ್ರಮದಿಂದ ಕೆಲಸ ಮಾಡುತ್ತಿದ್ದರು. ಬಹಳ ನಿಷ್ಠೆಯಿಂದ ಮತ್ತು ಪ್ರಾಮಾಣಿಕತೆಯಿಂದ ಜೀವನವನ್ನು ಸಾಗಿಸಿದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಮುಂದುವರೆಸಲು ಸೌಭಾಗ್ಯ ನೀಡಲಿ.

ಮುಂದಿನ ಜನಾಝ ರಬ್ವದ ಫಝ್ಲೇ ಉಮರ್ ಆಸ್ಪತ್ರೆಯ ಮಾಜಿ ಕಾರ್ಯನಿರ್ವಾಹಕ ಸನ್ಮಾನ್ಯ ಕರ್ನಲ್ ನಿವೃತ್ತ ಡಾಕ್ಟರ್ ಅಬ್ದುಲ್ ಖಾಲಿಕ್ ಸಾಹಿಬ್‌ರದ್ದಾಗಿದೆ. ಇವರು 97ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ಮಾಡಿದ್ದರು. ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ತಂದೆಯಾದ ಮಿಯಾ ಮುಹಮ್ಮದ್ ಆಲಂ ಸಾಹಿಬ್‌ರ ಮೂಲಕ ಪ್ರವೇಶಿಸಿತ್ತು. ಅವರು 1919ರಲ್ಲಿ ಬೈಅತ್ ಮಾಡಿದ್ದರು. ಅವರ ಮಗನಾದ ಡಾಕ್ಟರ್ ಅಬ್ದುಲ್ ಖಾಲಿಕ್ 1938ರಲ್ಲಿ ಬೈಅತ್ ಮಾಡಿದ್ದರು. ತನ್ನ ಬೈಅತ್ತಿನ ವಿವರವನ್ನು ಅವರು ಹೀಗೆ ಹೇಳುತ್ತಾರೆ: ನಮ್ಮ ತಂದೆ ಅಲ್‌ಫಝ್ಲ್ ತರಿಸುತ್ತಿದ್ದರು. ಅದನ್ನು ಓದಿ ಅಹ್ಮದಿಯ್ಯತ್ ಕಡೆಗೆ ಗಮನ ಸೆಳೆಯಿತು. 1938ರಲ್ಲಿ ನಾವು ಮೂವರು ಸಹೋದರ ಸಹೋದರಿಯರು ಬೈಅತ್ ಮಾಡಿದ್ದೆವು. ತಾಯಿ ಉಪವಾಸ ಮತ್ತು ನಮಾಝನ್ನು ನಿರ್ವಹಿಸುವವರಾಗಿದ್ದರು. ನಮ್ಮ ಬೈಅತ್ತಿನ ನಂತರ ಸ್ವಲ್ಪ ಕಾಲದಲ್ಲೇ ಅವರು ಸಹ ಬೈಅತ್ ಮಾಡಿದ್ದರು. 1939ರಲ್ಲಿ ಜೂಬಿಲಿ ಜಲ್ಸಕ್ಕಾಗಿ ಮೊದಲ ಬಾರಿ ಖಾದಿಯಾನಿಗೆ ಬಂದೆನು. ಅನಂತರ ಹೆಚ್ಚಾಗಿ ಜಲ್ಸಗೆ ಬರಲು ಸಂದರ್ಭ ಸಿಗುತ್ತಿದ್ದುವು. 1987ರಲ್ಲಿ ಅವರ ಪತ್ನಿಯ ನಿಧನವಾಗಿತ್ತು. ಅವರಿಗೆ ಇಬ್ಬರು ಪುತ್ರರು ಮತ್ತು ಪುತ್ರಿಯರು ಇರುವರು.

ಅವರ ಒಬ್ಬ ಮಗನಾದ ಡಾಕ್ಟರ್ ಅಬ್ದುಲ್‌ಬಾರಿ ಇಸ್ಲಾಮಾಬಾದ್ ಜಮಾಅತಿನ ಅಮೀರ್ ಆಗಿರುವರು. 1974ರಲ್ಲಿ ಭುಟ್ಟೋ ಸರ್ಕಾರ ಅಹ್ಮದಿಯರನ್ನು ಮುಸ್ಲಿಮೇತರರೆಂದು ಮಾಡಿಸುವ ದೌರ್ಜನ್ಯಕರವಾದ ಕಾನೂನನ್ನು ಮಂಜೂರು ಮಾಡಿದಾಗ ಡಾಕ್ಟರ್ ಸಾಹಿಬ್‌ರು ಸರ್ಕಾರಿ ಸೇವೆಗೆ ರಾಜಿನಾಮೆ ಕೊಟ್ಟರು. ನುಸ್ರತ್ ಜಹಾನ್ ಸ್ಕೀಮಿನ ಅಧೀನದಲ್ಲಿ ತನ್ನ ಸೇವೆಗಳನ್ನು ಅರ್ಪಿಸಿದರು. ಕೇಂದ್ರದ ವತಿಯಿಂದ ಅವರನ್ನು 1977ರಲ್ಲಿ ಸೀರಲಿಯೋನಿಗೆ ಕಳುಹಿಸಲಾಯಿತು. ಅಲ್ಲಿ ಅವರಿಗೆ ಮೂರು ವರ್ಷಗಳ ಕಾಲ ಮನುಕುಲದ ಸೇವೆ ಸಲ್ಲಿಸುವ ಸೌಭಾಗ್ಯ ಲಭಿಸಿತ್ತು. ಅನಂತರ 1922ರಲ್ಲಿ ಪೀ.ಆಯಿ.ಎ. ತಾಷ್ಕಂದಿಗಾಗಿ ವಿಮಾನ ಸರ್ವಿಸ್ ಶುರುಮಾಡಿದಾಗ ಡಾಕ್ಟರ್ ಸಾಹಿಬ್‌ರು ಈ ಸಮಯವನ್ನು ಅನುಯೋಜ್ಯವೆಂದು ಅರಿತುಕೊಂಡು ತಾಷ್ಕಂದ್ ಮತ್ತು ಉಜ್‌ಬೇಕಿಸ್ತಾನನಲ್ಲಿ ವಖ್ಫೇ ಆರ್ಝಿಯಾಗಿ ಇರಲು ಅರ್ಜಿ ಕೊಟ್ಟರು. ಕೇಂದ್ರ ಅದನ್ನು ಅಂಗೀಕರಿಸಿತು. ತನ್ನ ಕಿರಿಯ ಸಹೋದರಿ ಜೊತೆಗೆ ಸಮರ್‌ಖಂದ್ ಮತ್ತು ಬುಖಾರದಲ್ಲಿ ವಖ್ಫೇ ಆರ್ಝಿಯಾಗಿ ದಿನಗಳನ್ನು ಸಾಗಿಸಿದರು. ಈ ಸಂದರ್ಭದಲ್ಲಿ ಮನುಕುಲಕ್ಕೆ ಅಪರಿಮಿತವಾದ ಸೇವೆಗಳನ್ನು ಮಾಡಿದ್ದರು. ಅಹ್ಮದಿಯ್ಯತಿನ ಸಂದೇಶವನ್ನು ತಲುಪಿಸಲು ಕೂಡ ಅವರಿಗೆ ಸೌಭಾಗ್ಯ ಲಭಿಸಿತ್ತು. 1994ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ಅವರನ್ನು ರಬ್ವದ ಫಝ್ಲೇ ಉಮರ್ ಆಸ್ಪತ್ರೆಯ ಕಾರ್ಯ ನಿರ್ವಾಹಕರಾಗಿ ನಿಶ್ಚಯಿಸಿದರು. ಅಲ್ಲಿ ಅವರು 2005 ತನಕ ಸುಮಾರು 10 ವರ್ಷಗಳಿಗಿಂತ ಹೆಚ್ಚು ಕಾಲ ಸೇವೆ ಸಲ್ಲಿಸಿದರು. ಅವರ ಕಾಲದಲ್ಲಿ ಫಝ್ಲೇ ಉಮರ್ ಆಸ್ಪತ್ರೆಯ ನಿರ್ಮಾಣ ಮತ್ತು ವಿಸ್ತಾರದ ಅನೇಕ ಯೋಜನೆಗಳು ಪೂರ್ತಿಯಾಯಿತು. ಎಂಬತ್ತು ಎಂಬತ್ತೊಂದು ವಯಸ್ಸು ಆಗಿದ್ದರು ಅವರ ಸೇವೆಯ ಆವೇಶ ಯುವಕರಂತಾಗಿತ್ತು ಎಂದು ಒಬ್ಬ ಹುಡುಗ ಹೇಳಿದ್ದನು. ಆದರೆ ವಯಸ್ಸಾಗುತ್ತಿದೆ ಎಂದು ಅವರಿಗೆ ಗೊತ್ತಿದ್ದ ಕಾರಣದಿಂದ ನಿವೃತ್ತಿಗಾಗಿ ನನಗೆ 2005ರಲ್ಲಿ ಬರೆದಿದ್ದರು. ಅನಂತರ ಅವರು ನಿವೃತ್ತರಾದರು. ಅನಂತರ ಅವರು ಇಸ್ಲಾಮಾಬಾದಿನಲ್ಲಿ ಸ್ಥಿರವಾಸ ಮಾಡಿದರು. ಅಲ್ಲಿ ಇಸ್ಲಾಮಾಬಾದಿನಲ್ಲಿ ಪ್ರಾದೇಶಿಕ ಖಾಝಿಯಾಗಿ ಸೇವೆ ಸಲ್ಲಿಸುತ್ತಿದ್ದರು.

ಅವರ ಹಿರಿಯ ಮಗನಾದ ಅಬ್ದುಲ್‌ಬಾರಿ ಹೇಳುತ್ತಾರೆ: ಮಕ್ಕಳ ಧಾರ್ಮಿಕ ಮತ್ತು ನೈತಿಕ ತರಬೇತಿ ಬಗ್ಗೆ ಅವರಿಗೆ ಸದಾ ಕಾಳಜಿಯಿತ್ತು. ಪವಿತ್ರ ಖುರ್‌ಆನಿನ ಪಾರಾಯಣದಲ್ಲಿ ಹಗಲು ರಾತ್ರಿ ನಿರತರಾಗುತ್ತಿದ್ದರು. ಅವರ ಬಹಳ ಆಸಕ್ತಿದಾಯಕ ಕೆಲಸ ಅದೇ ಆಗಿತ್ತು. ಮುಖ್ಯ ವಿಷಯಗಳಲ್ಲಿ ಎಲ್ಲ ತೀರ್ಪುಗಳನ್ನು ಅವರು ಪವಿತ್ರ ಖುರ್‌ಆನಿನ ಬೆಳಕಿನಲ್ಲಿ ಮಾಡುತ್ತಿದ್ದರು.

ಅವರ ಅಳಿಯರಾದ ಈಗ ವಾಹ್‌ಕೇಂಟ್ ಜಿಲ್ಲೆಯ ನಾಇಬ್ ಅಮೀರ್ ಆಗಿರುವ ಡಾಕ್ಟರ್ ಮುಝಫ್ಫರ್ ಅಲಿ ನಾಸಿರ್ ಹೇಳುತ್ತಾರೆ: ಇಂದಿನ ತನಕ ದಿನಪೂರ್ತಿ ಪವಿತ್ರ ಖುರ್‌ಆನ್ ಇಷ್ಟು ಓದುವ ವ್ಯಕ್ತಿಯನ್ನು ನಾನು ಕಂಡಿಲ್ಲ. ಅವರಿಗೆ ಪವಿತ್ರ ಖುರ್‌ಆನಿನೊಂದಿಗೆ ಪ್ರೇಮವಿತ್ತು. ಒಂದು ಬಾರಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗುವಾಗ, ನಮಗೆ ಪವಿತ್ರ

ಖುರ್‌ಆನ್ ಯಾರು ಓದಿ ಹೇಳುವರು ಎಂದು ಹೇಳಿಕೊಂಡು ಅಲ್ಲಿಯ ಸ್ಟಾಫ್ ಬೇಸರಗೊಂಡರು. ಚಳಿಗಾಲ ಮತ್ತು ಬೇಸಿಗೆಗಾಲದಲ್ಲೂ ಅವರ ತಹಜ್ಜುದ್ ನಮಾಝ್ ನಮಗೆ ಒಂದು ಮಾದರಿಯಾಗಿತ್ತು. ಖಿಲಾಫತ್ ಮತ್ತು ಜಮಾಅತಿನೊಂದಿಗೆ ಆಳವಾದ ಪ್ರೀತಿಯಿತ್ತು. ಬಹಳ ಸರಳ ಜೀವನವಾಗಿತ್ತು. ಎಂದಿಗೂ ಯಾವುದೇ ದೂರಿರಲಿಲ್ಲ.

ಅವರ ಸಹೋದರನ ಮೊಮ್ಮಗನಾದ ಅಬ್ದುಸ್ಸಮದ್ ರಿಝ್‌ವಿ ಬರೆಯುತ್ತಾರೆ: ಅವರು ಅಲ್ಲಾಹನ ಸಂಪ್ರೀತಿಗಾಗಿ ಪ್ರತಿಯೊಂದು ಕಷ್ಟತೆಗಳನ್ನು ಸಹಿಸಿದರು. ತನ್ನ ಸಂತೋಷಗಳಿಂದ ದೂರವಿದ್ದರು. ರಬ್ವದಲ್ಲಿರುವ ಅವರ ಮನೆಯಲ್ಲಿ ನನಗೆ ತಂಗಲು ಅನೇಕ ಬಾರಿ ಸಂದರ್ಭ ಸಿಕ್ಕಿತ್ತು. ನನಗೆ ಅವರು ಜೀವಂತ ದೇವನನ್ನು ಅರಿಯಲು ಕಾರಣವಾಯಿತು. ಅವರ ತಹಜ್ಜುದ್ ನಮಾಝ್ ಅತುಲ್ಯವಾಗಿತ್ತು. ಖಿಲಾಫತಿನ ಗೌರವ ಮತ್ತು ಪ್ರೀತಿ ಅವರಲ್ಲಿ ಹಾಸುಹೊಕ್ಕಾಗಿತ್ತು. ಅದು ನಮ್ಮ ಅತ್ಯುತ್ತಮ ತರಬೇತಿಗೆ ಕಾರಣವಾಯಿತು.

ಫಝ್ಲೇ ಉಮರ್ ಆಸ್ಪತ್ರೆಯ ಡಾಕ್ಟರ್ ಅಬ್ದುಲ್ ಖಾಲಿಕ್ ಸಾಹಿಬ್‌ರು ಹೇಳುತ್ತಾರೆ: ಡಾಕ್ಟರ್ ಸಾಹಿಬ್‌ರು ಆಸ್ಪತ್ರೆಯ ಯುವ ಡಾಕ್ಟರ್‌ಗಳೊಂದಿಗೆ ವಾತ್ಸಲ್ಯದಿಂದ ವರ್ತಿಸುತ್ತಿದ್ದರು. ಜೂನಿಯರ್ ಡಾಕ್ಟರ್‌ಗಳ ಟ್ರೇನಿಂಗ್ ಕಡೆಗೆ ವಿಶೇಷ ಗಮನವಹಿಸಬೇಕೆಂದು ಸೀನಿಯರ್ ಡಾಕ್ಟರ್‌ರೊಡನೆ ಹೇಳುತ್ತಿದ್ದರು. ಆಸ್ಪತ್ರೆಯ ಹಣಗಳ ಪ್ರಾಮಾಣಿಕತೆಯಿಂದ ಮೇಲ್ನೋಟ ಮತ್ತು ಸಂರಕ್ಷಣೆ ಮಾಡುತ್ತಿದ್ದರು. ಬಡ ಮತ್ತು ನಿರ್ಗತಿಕ ಜನರಿಗೆ ಸ್ವಂತ ಜೇಬಿನಿಂದ ಸಹಾಯ ಮಾಡುತ್ತಿದ್ದರು.

ಡಾಕ್ಟರ್ ಅಶ್ರಫ್ ಮುಹಮ್ಮದ್ ಅಹ್ಮದ್ ಹೇಳುತ್ತಾರೆ: ಬಹಳ ತಾಳ್ಮೆಯುಳ್ಳವರಾಗಿದ್ದರು. ಬಹಳ ಸೌಮ್ಯ ಸ್ವಭಾವ ಮತ್ತು ಸಹನೆ ಇತ್ತು. ಬಹಳ ಕೃಪಾಳು ವ್ಯಕ್ತಿಯಾಗಿದ್ದರು. ಹೆಚ್ಚು ಮಾತನಾಡುವ ಅಭ್ಯಾಸವನ್ನು ಹೊಂದಿರಲಿಲ್ಲ. ಆದರೆ ವ್ಯವಸ್ಥೆಯ ದೃಷ್ಟಿಯಲ್ಲಿ ಸಣ್ಣ ಸಣ್ಣ ಸಂಗತಿಗಳನ್ನು ಬಹಳ ಸೂಕ್ಷ್ಮವಾಗಿ ನೋಡುತ್ತಿದ್ದರು. ನಿಯಮಗಳ ಪಾಲನೆ ಮಾಡಿಸುತ್ತಿದ್ದರು. ವಖ್ಫೇ ಆರ್ಝಿಗಾಗಿ ಇತರ ಡಾಕ್ಟರ್‌ಗಳನ್ನು ಹುರಿದುಂಬಿಸುತ್ತಿದ್ದರು. ಫಝ್ಲೆ ಉಮರ್ ಹಾಸ್ಪಟಲಿಗೆ ಬರಲು ತನ್ನ ಅಳಿಯನೊಡನೆ ಮತ್ತು ಪುತ್ರನೊಡನೆ ಸಹ ಹೇಳುತ್ತಿದ್ದರು.

ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಒಳಿತುಗಳನ್ನು ಅಲ್ಲಾಹನು ಅವರ ಮಕ್ಕಳಲ್ಲಿ ಜಾರಿಯಾಗಿಸಲಿ. ಜುಮಾ ನಮಾಝ್ ನಂತರ ಎಲ್ಲ ದಿವಂಗತರ ಜನಾಝ ನಮಾಝ್ ನಿರ್ವಹಿಸುವೆನು.

**************

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಮತ್ತು ಹಝ್ರತ್ ರಸೂಲುಲ್ಲಾಹ್(ಸ) ರವರ ಸತ್ಯಕ್ಕಾಗಿ ಸಾಕ್ಷ್ಯಗಳು ದೈವಿಕ ದೃಷ್ಟಾಂತಗಳಿಂದ ಈ ಸಮುದಾಯದಲ್ಲಿ ಸಜ್ಜನರಿಂದ ಉಂಟಾಗಿವೆ ಮತ್ತು ಉಂಟಾಗುತ್ತಿವೆ. ಅದರ ಉದಾಹರಣೆ ಇತರ ಧರ್ಮಗಳಲ್ಲಿ ಖಂಡಿತವಾಗಿಯೂ ಇಲ್ಲ. (ಕಿತಾಬುಲ್ ಬರ್‍ರಿಯ. ರೂಹಾನಿ ಖಝಾಇನ್, ಸಂಪುಟ-13, ಪುಟ-92)

**ವಿಗ್ರಹಾರಾಧನೆಯ ಸೂಕ್ಷ್ಮ ವಿವರಗಳು ಮತ್ತು ಏಕದೇವತ್ವದ ಪವಿತ್ರ ಮಾದರಿಯು ತೌರಾತಿನಲ್ಲಿಲ್ಲ.**

**ಪವಿತ್ರ ಖುರ್‌ಆನ್ ಯಹೂದ್ಯರಿಗೆ ವಿಗ್ರಹಾರಾಧನೆಯ ಜ್ವರದಿಂದ ಬಿಡಿಸಲು ಮತ್ತು ಏಕದೇವತ್ವದ ಪವಿತ್ರ ಮಾದರಿಗಳನ್ನು ತೋರಿಸಲು ಬಂದಿರುತ್ತದೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. "ಏಕತ್ವ" ಎಂದರೆ ಕೇವಲ 'ಲಾ ಇಲಾಹ ಇಲ್ಲಲ್ಲಾಹ್" ಎಂದು ಬಾಯಿಯಿಂದ ಉಚ್ಚರಿಸುವುದಲ್ಲ, ಅದರ ಹೊರತಾಗಿ ಮನಸ್ಸಿನಲ್ಲಿ ಸಾವಿರಾರು ವಿಗ್ರಹಗಳಿದ್ದರೆ, ತಮ್ಮ ಎಲ್ಲಾ ಕಾರ್ಯತಂತ್ರಗಳನ್ನು ದೇವರ ಪ್ರತಾಪ ಗೌರವಕ್ಕೆ ಸಮಾನ ಎಂದು ಭಾವಿಸುವುದು ಅಥವ ಒಬ್ಬ ಮನುಷ್ಯನ ಮೇಲೆ ದೇವರ ರೀತಿಯ ಭರವಸೆಯನ್ನು ಹೊಂದುವುದು ಅಥವಾ ತನ್ನ ಆತ್ಮವನ್ನು ದೇವರ ರೀತಿಯ ಘನತೆ ನೀಡುವುದು ಇದೆಲ್ಲವೂ ಅಲ್ಲಾಹನ ದೃಷ್ಟಿಯಲ್ಲಿ ವಿಗ್ರಹಗಳಾಗಿವೆ. ವಿಗ್ರಹಗಳೆಂದರೆ ಕೇವಲ ಚಿನ್ನ, ಬೆಳ್ಳಿ, ಕಿತ್ತಳೆ ಅಥವಾ ಕಲ್ಲುಗಳಿಂದ ಮಾಡಿದ್ದಲ್ಲ. ಅವರ ಮೇಲೆ ಭರವಸೆಯನ್ನಿಡಲಾಗುತ್ತದೆ. ಬದಲು ಯಾವೊಂದು ನುಡಿ ಅಥವ ನಡೆ ಅದು ದೇವರಿಗೆ ಸಮಾನವಾಗಿ ನೀಡುವ ಗೌರವಾದರಂತಿದ್ದರೆ ಅದು ಅಲ್ಲಾಹನ ದೃಷ್ಟಿಯಲ್ಲಿ ವಿಗ್ರಹಗಳಾಗಿವೆ. ಹೌದು ತೌರಾತಿನಲ್ಲಿ ವಿಗ್ರಹಾರಾಧನೆಯ ಕುರಿತು ಈ ರೀತಿಯ ಸೂಕ್ಷ್ಮ ವಿವರಗಳಿಲ್ಲ. ಇದು ಸತ್ಯವಾಗಿದೆ. ಆದರೆ ಪವಿತ್ರ ಖುರ್‌ಆನ್ ಈ ರೀತಿಯ ವಿವರಗಳಿಂದ ತುಂಬಿ ಹೋಗಿದೆ. ಅಂದಹಾಗೆ ಪವಿತ್ರ ಖುರ್‌ಆನ್ನನ್ನು ಅವತರಿಸಿಕೊಟ್ಟ ಅಲ್ಲಾಹನ ಇದು ಸಹ ಒಂದು ಆಶಯವಾಗಿತ್ತು. ಈ ವಿಗ್ರಹಾರಾಧನೆ ಕ್ಷಯರೋಗದಂತೆ ತಲುಪಿತ್ತು. ಜನರ ಹೃದಯಗಳಿಂದ ದೂರವಾಗಬೇಕು ಮತ್ತು ಈ ಕಾಲಘಟ್ಟದಲ್ಲಿ ಯಹೂದ್ಯರು ವಿಗ್ರಹಾರಾಧನೆಯಲ್ಲಿ ಮುಳುಗಿ ಹೋಗಿದ್ದರು. ತೌರಾತ್ ಅದನ್ನು ಬಿಡಿಸಲು ಶಕ್ತನಾಗಿರಲಿಲ್ಲ. ಆದುದರಿಂದ ತೌರಾತಿನಲ್ಲಿ ಈ ರೀತಿಯ ಸೂಕ್ಷ್ಮ ಶಿಕ್ಷಣಗಳಿರಲಿಲ್ಲ. ಆದುದರಿಂದ ಈ ರೋಗ ಎಲ್ಲಾ ಯಹೂದ್ಯರಲ್ಲಿ ಹರಡಿಹೋಗಿತ್ತು. ಅದು ಏಕದೇವತ್ವದ ಒಂದು ಪವಿತ್ರವಾದ ಮಾದರಿಯನ್ನು ಬಯಸುತಿತ್ತು. ಅದು ಜೀವಂತವಾಗಿ ಓರ್ವ ಪರಿಪೂರ್ಣ ಮನುಷ್ಯನಲ್ಲಿ ವ್ಯಕ್ತವಾಗಿರುವಂತಿರಬೇಕು. (ಅದೇ ಪುಟ 349).

**'ಲಾ ಇಲಾಹ ಇಲ್ಲಲ್ಲಾಹ್" ಕಲಿಮ ಖುರ್‌ಆನ್ ಕಲಿಸಿದೆ ಹೊರತು ಇಂಜೀಲ್ ಅಲ್ಲ.**

ಪವಿತ್ರ ಖುರಆನ್‌ನ ನಿಜವಾದ ಉದ್ದೇಶವೆಂದರೆ ಅಲ್ಲಾಹನು ತನ್ನ ಅಸ್ತಿತ್ವದಲ್ಲಿ ಹೇಗೆ ಏಕನಾಗಿದ್ದಾನೋ ಹಾಗೆಯೇ ತನ್ನ ಪ್ರೀತಿಯ ನೆಲೆಯಲ್ಲಿಯೂ ಸಹ ಏಕನಾಗ ಬಯಸುತ್ತಾನೆ. ಅದು ಕಲಿಮ "ಲಾ ಇಲಾಹ ಇಲ್ಲಲ್ಲಾಹ್' ರೂಪದಲ್ಲಿ ಎಲ್ಲಾ ಸಮಯಕ್ಕೂ ಮುಸಲ್ಮಾನ ನಾಲಿಗೆಯ ಮೇಲೆ ಸ್ಮರಿಸಲ್ಪಡುತ್ತಿದೆ. ಅದು ಅದನ್ನೇ ಸಂಕೇತಿಸುತ್ತದೆ. ಏಕೆಂದರೆ ಇಲಾಹ್ -ವರಾಹ್‌ದಿಂದ ಕೂಡಿಕೊಂಡಿದೆ. ಅದರ ಅರ್ಥ ಅವನು ಎಂತಹ ಪ್ರಿಯಕನಾಗಿದ್ದಾನೆಂದರೆ ಅವನು ಆರಾಧನೆಗೆ ಅರ್ಹನಾಗಿದ್ದಾನೆ. ಈ ಕಲಿಮ ವನ್ನು ತೌರಾತಾಗಲಿ, ಇಂಜೀಲಾಗಲಿ ಕಲಿಸಲಿಲ್ಲ. ಕೇವಲ ಖುರ್‌ಆನ್ ಕಲಿಸಿದೆ. ಮತ್ತು ಈ ಕಲಿಮ ಇಸ್ಲಾಮಿನೊಂದಿಗೆ ಒಂದು ಮುಕುಟದ ರೀತಿ ಸಂಬಂಧ ಹೊಂದಿದೆ. ಅದೇ ಕಲೀಮ ಐದು ಹೊತ್ತು ಮಸೀದಿಗಳ ಗೋಪುರಗಳಿಂದ ಉಚ್ಛಸ್ವರದಲ್ಲಿ ಉಚ್ಚರಿಸಲಾಗುತ್ತದೆ. ಅದರಿಂದ ಕ್ರೈಸ್ತರು ಮತ್ತು ಹಿಂದುಗಳೆಲ್ಲ ಬೇಸರಪಡುತ್ತಾರೆ. (ಅದೇ ಪುಟ 316).

**ತೌರಾತ್ ಅದರ ಶಿಕ್ಷಣ ನಷ್ಟಕ್ಕೊಳಗಾದ ಕಾರಣ ಮತ್ತು ಪದಗಳ ಹಾಗೂ ಅರ್ಥ ಸಂಬಂಧದಲ್ಲಿ ಹಸ್ತಕ್ಷೇಪಕ್ಕೊಳಗಾದ ಕಾರಣ ಅದು ಪರಿಪೂರ್ಣ ರೀತಿಯಲ್ಲಿ ಮಾರ್ಗದರ್ಶನಕ್ಕೆ ಅರ್ಹವಾಗಿರಲಿಲ್ಲ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಉಳಿದ ಪ್ರಶ್ನೆಯೇನೆಂದರೆ ಯಹೂದ್ಯರಿಗೆ ಮುಸಲ್ಮಾನರಾಗುವ ಅವಶ್ಯಕತೆಯೇನಿತ್ತು. ಅವರು ಮೊದಲೇ ಏಕದೇವತ್ವ ವಾದಿಗಳಾಗಿದ್ದರು? ಅದರ ಉತ್ತರ ಈಗಾಗಲೇ ನಾವು ನೀಡಿದ್ದೇವೆ. ಏಕದೇವತ್ವ ಯಹೂದಿಯರ ಹೃದಯಗಳಲ್ಲಿ ಸ್ಥಾಪಿತವಾಗಿರಲಿಲ್ಲ. ಕೇವಲ ಗ್ರಂಥಗಳಲಿದ್ದವು, ಅದು ಸಹ ನ್ಯೂನತೆ ಪೂರ್ಣವಾಗಿದ್ದವು. ಆದುದರಿಂದ ಏಕದೇವತ್ವದ ಜೀವಂತ ಆತ್ಮ ಪಡೆಯುವ ಅವಶ್ಯಕತೆಯಿತ್ತು. ಏಕೆಂದರೆ ಎಲ್ಲಿಯವರೆಗೆ ಮನುಷ್ಯನ ಹೃದಯದಲ್ಲಿ ಏಕದೇವತ್ವದ ಜೀವಂತ ಆತ್ಮವಿರುವುದಿಲ್ಲ ಅಲ್ಲಿಯವರೆಗೆ ಮುಕ್ತಿ ಸಾಧ್ಯವಿಲ್ಲ. ಯಹೂದಿಯರು ಮೃತ ಸಮಾನವಾಗಿದ್ದರು. ಹೃದಯ ಕಾಠಿಣ್ಯದಿಂದಾಗಿ ಮತ್ತು ತರಹ ತರಹದ ಅವಿಧೇಯತೆ ಕಾರಣದಿಂದಾಗಿ ಆ ಜೀವಂತ ಆತ್ಮ ಅವರಿಂದ ಹೊರಟು ಹೋಗಿತ್ತು. ಅವರಿಗೆ ದೇವನೊಂದಿಗೆ ಯಾವ ಸಂಬಂಧವು ಬಾಕಿ ಉಳಿದಿರಲಿಲ್ಲ. ಅವರ ತೌರಾತ್ ಶಿಕ್ಷಣದ ಕೊರತೆಯಿಂದಾಗಿ ಅಲ್ಲದೆ ಪದಗಳ ಹಾಗೂ ಅರ್ಥದ ಹಸ್ತಕ್ಷೇಪದಿಂದಾಗಿ ಮಾರ್ಗದರ್ಶನಕ್ಕೆ ಯೋಗ್ಯವಾಗಿರಲಿಲ್ಲ. ಆದುದರಿಂದ ಅಲ್ಲಾಹನು ಜೀವಂತ ಸಂಭಾಷಣೆ ಶುದ್ಧ ಮಳೆಯ ರೂಪದಲ್ಲಿ ಅವತರಿಸಿದನು ಮತ್ತು ಆ ಜೀವಂತ ಸಂಭಾಷಣೆಯೆಡೆ ಅವರಿಗೆ ಕರೆ ನೀಡಿದರು. ಅದರಿಂದ ಅವರು ವಿವಿಧ ರೀತಿಯ ಮೋಸಗಾರಿಕೆಯಿಂದ, ತಪ್ಪುಗಳಿಂದ ಬಿಡಿಸಿಕೊಂಡು ಯಥಾರ್ಥ ಮುಕ್ತಿ ಪಡೆಯುವಂತಾಗಲಿ ಎಂದು. ಹಾಗೆ ಖುರ್‌ಆನ್‌ನ ಅವತರಣಿಕೆಯ ಒಂದು ಅವಶ್ಯಕತೆ ಮೃತಸಮಾನ ಯಹೂದಿಯರಿಗೆ ಜೀವಂತ ಏಕದೇವತ್ವದ ಪಾಠ ಕಲಿಸುವುದಾಗಿತ್ತು. ಮತ್ತು ಇನ್ನೊಂದು ಉದ್ದೇಶವೆಂದರೆ ಅವರ ತಪ್ಪುಗಳಿಂದ ಎಚ್ಚರಿಕೆ ನೀಡುವುದಾಗಿತ್ತು. ಮೂರನೆಯದು ತೌರಾತಿನಲ್ಲಿ ಸಮಸ್ಯೆಗಳಿಗೆ ಕೇವಲ ಸಾಂಕೇತಿಕವಾಗಿರುವ ಪರಿಹಾರ ಮಾರ್ಗಗಳಿದ್ದವು. ಉದಾಹರಣೆಗೆ ಅಂತ್ಯ ದಿನದಂದು ಲೆಕ್ಕ ಪರಿಶೋಧನೆ, ಆತ್ಮರೋಹಣ, ಸ್ವರ್ಗ ನರಕದ ಸಮಸ್ಯೆಗಳನ್ನು ವಿವರವಾಗಿ ತಿಳಿಸಿ ಕೊಡಬೇಕಾಗಿತ್ತು. (ಅದೇ ಪುಟ 351).

**ಖುರ್‌ಆನ್ ತನ್ನ ಕರ್ತವ್ಯ ಅತ್ಯುತ್ತಮ ರೀತಿಯಲ್ಲಿ ಪೂರ್ಣಗೊಳಿಸಿದೆ. ದಾನವರನ್ನು ದೇವಪುರುಷರನ್ನಾಗಿ ಮಾಡಿದನು. ಆದರೆ ಅದರ ಎದುರಾಗಿ ತೌರಾತ್ ಮೂಕನ ಹಾಗೆ ಮೂಕವಾಗಿದೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಇದು ಸ್ಪಷ್ಟ ರೂಪದಲ್ಲಿ ಸಾಬೀತುಗೊಂಡಿದೆ. ಖುರ್‌ಆನ್ ಶರೀಅತ್ತಿನ ಪ್ರತಿಯೊಂದು ಭಾಗವನ್ನು ಪರಿಪೂರ್ಣದಲ್ಲಿ ಎತ್ತಿ ತೋರಿಸಿದೆ ಶರೀಅತ್ತಿನ ಎರಡು ಪ್ರಮುಖ ಬಾಗಗಳಿವೆ. ಅಲ್ಲಾಹನ ಹಕ್ಕುಗಳು ಮತ್ತು ಅವನ

ಸೃಷ್ಟಿಯ ಹಕ್ಕುಗಳು. ಈ ಎರಡೂ ಭಾಗಗಳನ್ನು ಕೇವಲ ಖುರ್‌ಆನ್ ಮಾತ್ರ ಪೂರ್ಣಗೊಳಿಸಿದೆ. ಇದು ಖುರ್‌ಆನ್‌ನ ಪ್ರಮುಖ ಕರ್ತವ್ಯವೂ ಆಗಿತ್ತು. ಅದರಿಂದ ದಾನವರೂಪಿ ಮನುಷ್ಯನು ಮನುಷ್ಯನಾಗಬೇಕು, ಮನುಷ್ಯನಿಂದ ಉತ್ತಮ ಚರಿತ್ರೆಯುಳ್ಳ ಮನುಷ್ಯನಾಗಬೇಕು ಮತ್ತು ಉತ್ತಮ ಮನುಷ್ಯನಿಂದ ದೇವಸ್ವರೂಪಿ ಮನುಷ್ಯನಾಗಬೇಕು. ಹಾಗೆ ಅದನ್ನು ಪವಿತ್ರ ಖುರ್‌ಆನ್ ಪರಿಪೂರ್ಣ ರೀತಿಯಲ್ಲಿ ಸಾದರಪಡಿಸಿದೆ. ಅದರ ಪ್ರತಿರೂಪವಾಗಿ ತೌರಾತ್ ಒಂದು ಮೂಕನ ಹಾಗೆ ಮೂಕನಾಗಿದೆ. (ಅದೇ ಪುಟ 352).

**ತೌರಾತ್ ಮತ್ತು ಇಂಜೀಲ್ ಇದ್ದಾಗಲೂ ಖುರ್‌ಆನ್‌ನ ಅವಶ್ಯಕತೆ ಖುರ್‌ಆನ್ ಯಹೂದಿಯರ ಮತ್ತು ಕ್ರೈಸ್ತರ ಮಧ್ಯದಲ್ಲಿರುವ ಜಗಳವನ್ನು ಪರಿಹರಿಸಿಕೊಟ್ಟಿದೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಖುರ್‌ಆನ್‌ನ ಅವಶ್ಯಕತೆಗಳಲ್ಲಿ ಇದು ಸಹ ಒಂದಾಗಿತ್ತು, ಹಝ್ರತ್ ಮಸೀಹರ ಕುರಿತು ಯಹೂದಿ ಮತ್ತು ಕ್ರೈಸ್ತರಲ್ಲಿರುವ ಭಿನ್ನಮತವನ್ನು ದೂರಸರಿಸುವುದಾಗಿತ್ತು. ಹಾಗೆ ಪವಿತ್ರ ಖುರ್‌ಆನ್ ಅದನ್ನು ಪರಿಹರಿಸಿಕೊಟ್ಟಿದೆ. ಯಹೂದಿಯರು ಭಾವಿಸುತ್ತಿದ್ದರು ಕ್ರೈಸ್ತ ಪ್ರವಾದಿ ಅಂದರೆ ಮಸೀಹರು ಶಿಲುಬೆಯ ಮೇಲೆ ಮೃತಪಟ್ಟರು ಎಂದು. ಹಾಗೆ ತೌರಾತಿನ ಪ್ರಕಾರ ಅವರು ಶಾಪಗ್ರಸ್ತನಾದರು. ದೇವನ ಹತ್ತಿರ ಎತ್ತಲ್ಪಟ್ಟಿಲ್ಲ. ಇದು ಅವರ ಸುಳ್ಳುಗಾರಿಕೆಗೆ ಸಾಕ್ಷ್ಯವಾಗಿತ್ತು. ಕ್ರೈಸ್ತರ ಭಾವನೆಯಲ್ಲಿ ಶಾಪಗ್ರಸ್ತನಂತೂ ಆಗಿದ್ದಾನೆ. ಆದರೆ ನಮಗೋಸ್ಕರ ನಂತರ ಅವರ ಶಾಪ ದೂರವಾಯಿತು ಮತ್ತು ದೇವನಿಗೆ ಪ್ರಿಯನಾದರು. ಅವರನ್ನು ತನ್ನ ಬಲಬದಿಯಲ್ಲಿ ಕುಳ್ಳಿರಿಸಿಕೊಂಡನು. ಈ ಭಿನ್ನಾಭಿಪ್ರಾಯ ವಾದವಿವಾದ ಮಸೀಹರ ಕುರಿತು ಯಹೂದಿ ಮತ್ತು ಕ್ರೈಸ್ತರ ನಡುವೆ ನಡೆದುಬಂದಿತ್ತು. ಹೀಗೆ ಅಂತಿಮವಾಗಿ ಪವಿತ್ರ ಖುರ್‌ಆನ್ ಅವತರಿಸುವ ಅವಶ್ಯಕತೆ ಏನಿತ್ತು? ಓ ಮೂಢರೇ! ಮತ್ತು ಹೃದಯ ಅಂಧರೇ! ಖುರ್‌ಆನ್ ಪರಿಪೂರ್ಣ ಏಕದೇವತ್ವ ಪ್ರತಿಪಾದಿಸಿದೆ. ಖುರ್‌ಆನ್ ಬುದ್ಧಿ ಮತ್ತು ಯುಕ್ತಿಯನ್ನು ಬೇರ್ಪಡಿಸಿ ತೋರಿಸಿದೆ. ಖುರ್‌ಆನ್ ಏಕದೇವತ್ವದ ಮಹಾನತೆಯನ್ನು ಎತ್ತಿ ತೋರಿಸಿದೆ. ಖುರ್‌ಆನ್ ಏಕದೇವತ್ವ ಮತ್ತು ದೇವನಗುಣಗಳನ್ನು ಸಾಕ್ಷಾತಗೊಳಿಸಿದೆ. ದೇವ ಅಸ್ತಿತ್ವದ ಸಾಕ್ಷ್ಯಗಳನ್ನು, ಬೌದ್ಧಿಕವಾಗಿಯೂ ಸಾಕ್ಷ್ಯ ರೂಪದಲ್ಲಿಯೂ ಸಾದರಪಡಿಸಿದೆ. ದಿವ್ಯಸ್ವಪ್ನಗಳ ಮೂಲಕವು ಸಾಬೀತುಗೊಳಿಸಿದೆ. ಮೊದಲು ಕಥೆ ಕಾದಂಬರಿ ರೀತಿಯಲ್ಲಿರುವ ಧರ್ಮವನ್ನು ಶೈಕ್ಷಣಿಕವಾಗಿಯೂ ಸಾದರಪಡಿಸಿದೆ. ಎಲ್ಲಾ ನಂಬಿಕೆಗಳನ್ನು ಜಾಣ್ಮೆಯ ರೂಪ ನೀಡಿದೆ. ಆಧ್ಯಾತ್ಮಿಕ ಜ್ಞಾನದ ಅಪೂರ್ಣ ಭಾಗವನ್ನು ಉನ್ನತಿಗೇರಿಸಿದೆ. ಯೇಸುವಿನ ಕೊರಳಿನ ಮೇಲಿದ್ದ ಶಾಪದ ಭಾರ ಕಳಗಿಳಿಸಿದೆ ಮತ್ತು ಅವರ ಪಾವಿತ್ರ್ಯತೆ ಸತ್ಯಸಂಧತೆಯ ಪ್ರವಾದಿಯಾಗಿರುವುದನ್ನು ಸಾಬೀತುಗೊಳಿಸಿದೆ. ಇದೆಲ್ಲ ಅನುಗ್ರಹಗಳಿದ್ದಾಗಲೂ ಇನ್ನೂ ಖುರ್‌ಆನ್‌ನ ಅವಶ್ಯಕತೆ ಸಾಬೀತುಗೊಂಡಿಲ್ಲವೆ?

ನೆನಪಿರಲಿ ಖುರ್‌ಆನ್ ಬಹಳ ಸ್ಪಷ್ಟರೂಪದಲ್ಲಿ ತನ್ನ ಅವಶ್ಯಕತೆ ಸಾಬೀತುಪಡಿಸಿದೆ. ಖುರ್‌ಆನ್ ಸ್ಪಷ್ಟವಾಗಿ ಹೇಳುತ್ತದೆ. 'ಇಲಮೂ ಅನ್ನಲ್ಲಾಹ ಯುಹಿಲ್ ಅರ್ಝ ಭಾದ ಮೌತಿಹ" ಅಂದರೆ ಈ ಮಾತು ಮನದಟ್ಟಾಗಿರಲಿ. ಈ ಭೂಮಿ ಸತ್ತು ಹೋಗಿತ್ತು. ಆಗ ಅಲ್ಲಾಹನು ಹೊಸ ದೆಸೆಯಿಂದ ಅದನ್ನು ಜೀವಂತಗೊಳಿಸಿದ. ಇತಿಹಾಸ ಸಾಕ್ಷ ನೀಡುತ್ತದೆ. ಖುರ್‌ಆನ್ ಅವತರಿಸಿದ ಕಾಲಘಟ್ಟದಲ್ಲಿ, ಅವತರಣದ ಸಮೀಪ ಕಾಲದಲ್ಲಿ ಎಲ್ಲಾ ಸಮುದಾಯಗಳು ತನ್ನ ನಡತೆ ಕಳೆದುಕೊಂಡಿದ್ದವು ಫಾದರಿ ಫಿಂಡಲ್ ಮೀಝಾನುಲ್ ಹಕ್ ಗ್ರಂಥ ರಚನೆಕಾರ ಅಷ್ಟೊಂದು ಧರ್ಮದ್ವೇಷಿಯಾದರೂ ಸಹ ಮೀಝಾನುಲ್ ಹಖ್ ಗ್ರಂಥದ ಸಾಕ್ಷ್ಯ ವಹಿಸಿ ಹೇಳುತ್ತಾರೆ. ಖುರ್‌ಆನ್‌ನ ಅವತರಿಣಿಕೆ ಕಾಲಘಟ್ಟದಲ್ಲಿ ಯಹೂದಿ ಮತ್ತು ಕ್ರೈಸ್ತರ ನಡತೆಗಳು ಕೆಟ್ಟು ಹೋಗಿದ್ದವು. ಅವರ ಸ್ಥಿತಿ ತುಂಬ ಹದಗೆಟ್ಟಿದ್ದವು. ಖುರ್‌ಆನ್‌ನ ಆಗಮನ ಅವರಿಗಾಗಿ ಒಂದು ಮುನ್ನೆಚ್ಚರಿಕೆಯಾಗಿತ್ತು. ಮತ್ತೆ ಹೇಳುತ್ತಾರೆ. ಖುರ್‌ಆನ್‌ನ ಅವಶ್ಯಕತೆ ಏನಿತ್ತು ಎಂದು. ಓ ಮೂಢರೇ! ಮತ್ತು ಹೃದಯಗಳ ಅಂಧರೇ! ಖುರ್‌ಆನ್ ಇಳಿಯುವುದಕ್ಕಿಂತ ಮೊದಲಿನ ಸಮಯದ ಭ್ರಷ್ಟತೆಯ ಬಿರುಗಾಳಿಯು, ಯಾವ ಪ್ರವಾದಿಯ ಸಮಯದಲ್ಲೂ ಕಂಡುಬಂದಿಲ್ಲ. ಅದು ಲೋಕವನ್ನು ಅಂಧಕಾರದಲ್ಲಿ ಕಂಡು ಪ್ರಕಾಶವನ್ನು ನೀಡಿದೆ. ದಾರಿ ತಪ್ಪಿದವರಿಗೆ ಮಾರ್ಗದರ್ಶ ನೀಡಿದೆ. ಮೃತರಾಗಿ ಕಂಡವರಿಗೆ ಜೀವ ದಯಪಾಲಿಸಿದೆ. ಇನ್ನು ಅದರ ಅವಶ್ಯಕತೆ ಪ್ರತಿಪಾದಿಸುವ ಅವಶ್ಯಕತೆ ಇದೆಯೇ, ಇನ್ನೇನು ಮಾಡುವುದು ಬಾಕಿ ಇದೆ? (ಅದೇ ಪುಟ 353-356).

ನಾವು ಕೇವಲ ಅದೇ ಗ್ರಂಥದಿಂದ ಅಂದರೆ 'ಸಿರಾಜುದ್ದೀನ್ ಈಸಾಯಿ ಕೇ ಚಾರ್ ಸವಾಲೊಂ ಕಾ ಜವಾಬ್" ನಿಂದ ತೌರಾತ್ ಮತ್ತು ಇಂಜೀಲನ್ನು ಖುರ್‌ಆನ್‌ಗೆ ಹೋಲಿಸಿ ವಿವರ ಪ್ರಸ್ತುತಪಡಿಸಿದ್ದೇವೆ. ಮಸೀಹ್ ಮೌಊದ್(ಅ) ರವರ ಇನ್ನಷ್ಟು ಗ್ರಂಥಗಳನ್ನು ಅದರಲ್ಲಿ ಸೇರಿಸಿಕೊಂಡರೆ ಇದು ಇನ್ನು ದೀರ್ಘವಾದ ವಿಷಯ ಆಗಬಹುದು. ಮುಂದಿನ ಸಂಚಿಕೆಯಲ್ಲಿ ನಾವು ಇನ್ ಶಾಅಲ್ಲಾಹ್ ಇನ್ನು ಕೆಲವು ತುಲನಾತ್ಮಕ ವಿವರ ಪ್ರಸ್ತುತಪಡಿಸಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ವೈಭವಯುತ ಬಹುಮಾನದ ಪಂಥಾಹ್ವಾನ ಸಹ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

**ವ ಅಲಲ್ಲಾಹಿ ಖಸ್ದುಸ್ಸಬೀಲಿ** ವಿನ ತಾತ್ಪರ್ಯ ಸರಿಯಾದ ಮಾರ್ಗ ತೋರಿಸುವುದು ಅಲ್ಲಾಹನ ಮೇಲೆ ಅನಿವಾರ್ಯವಾಗಿದೆ. ಅಂದರೆ **ಹಕ್ಕುನ್ ಅಲಲ್ಲಾಹಿ ಬಯಾನು ಬಸದುಸ್ಸಬೀಲಿ** ಅದೇ ವಿಷಯ ಮೊದಲು ಕಡೆ ಹೀಗೆ ಹೇಳಲಾಗಿದೆ. **"ಇನ್ನ ಅಲೈನ ಲಲ್‌ಹುದಾ"** (ಸೂರ: ಅಲ್ಲೈಲ್) ಅಂದರೆ ಸನ್ಮಾರ್ಗ ದಯಪಾಲಿಸುವುದು ನಮ್ಮ ಕೆಲಸವಾಗಿದೆ. ನಾವೇ ಕೊಡುವೆವು. **ಖಸದುಸ್ಸಬೀಲ್** ಸರಿಯಾದ ಮಾರ್ಗ ಅಥವಾ ನ್ಯೂನತೆ ರಹಿತ ಹಾಗೂ ಪರಿಪೂರ್ಣ ಸುರಕ್ಷಿತ ಮಾರ್ಗ ಅಲ್ಲಾಹನು ಮಾತ್ರ ತೋರಿಸಬಲ್ಲನು. ಇಲ್ಲದಿದ್ದರೆ ಮನುಷ್ಯರು ಎಂದೆಂದೂ ಲೋಕದಲ್ಲಿ ಯಾವುದಾದರೂ ಮಾರ್ಗ ಸೂಚಿಸಿದರೆ ಅದು ಒಂದು ಹೆಚ್ಚು ಕಡಿಮೆ ಅಂದರೆ ಅಸಮತೋಲನೆಯಿಂದ ಕೂಡಿರುತ್ತದೆ. ಈ ವಚನದಲ್ಲಿ ಇದು ಸಹ ತಿಳಿಸಲಾಗಿದೆ. ಅಲ್ಲಾಹನ ಮಾರ್ಗದರ್ಶನ ಹೊರತು ಯಾವ ಮನುಷ್ಯನು ಪಕ್ಷಪಾತ ರಹಿತ ಮಾರ್ಗ ತೋರಿಸಲು ಸಾಧ್ಯವಿಲ್ಲ. ಏಕೆಂದರೆ ಮನುಷ್ಯನಿಗೆ ಯಾರೊಬ್ಬರಿಂದ ಶತ್ರುತನವಾದರೂ ಇರುತ್ತದೆ. ಅಥವಾ ಪ್ರೀತಿ. ಅದೇ ಕಾರಣದಿಂದ ಮನುಷ್ಯನು ಮಾಡಿದ ಕಾನೂನುಗಳಲ್ಲಿ ಸದಾ ಒಂದಿಲ್ಲ ಒಂದು ರೀತಿಯ ನ್ಯೂನತೆಗಳಿರುತ್ತವೆ. ಕೆಲವರ ಹಕ್ಕುಗಳನ್ನು ದಮನಿಸಲಾಗಿದ್ದರೆ ಕೆಲಸವರಿಗೆ ಅಧಿಕ ನೀಡಲಾಗುತ್ತದೆ. ಅಂದಹಾಗೆ ಸರಿಸಮಾನ ಹಕ್ಕುಗಳು, ಕಡಿಮೆಯೂ ಅಲ್ಲ, ಅಧಿಕವೂ ಅಲ್ಲ. ಅದು ಕೇವಲ ಅಲ್ಲಾಹನು ಮಾತ್ರ ಕೊಡಬಲ್ಲನು. ಏಕೆಂದರೆ ಅವನಿಗೆ ಯಾರ ಹಂಗೂ ಇಲ್ಲ. ಎಲ್ಲರೂ ಅವನ ದಾಸರೇ.

ಇದು ಎಂತಹ ಬಲವಾದ ಸತ್ಯವಾಗಿದೆ. ಮನುಷ್ಯನು ಸಾವಿರಾರು ವರ್ಷಗಳಿಂದ ಕಾನೂನುಗಳನ್ನು ಮಾಡುತ್ತಲೇ ಬಂದಿದ್ದಾನೆ. ಆದರೂ ಒಬ್ಬರ ಹಕ್ಕುಗಳನ್ನು ಮೊಟಕುಗೊಳಿಸಿದರೆ ಒಬ್ಬರಿಗೆ ಅಧಿಕ ನೀಡಲಾಗುತ್ತದೆ. ಇತ್ತೀಚೆಗಿನ ರಾಜಕೀಯ ಪರಿಸ್ಥಿತಿಗಳನ್ನೇ ನೋಡಿಕೊಳ್ಳಿ. ಒಂದು ಸರಕಾರ ಕಾರ್ಮಿಕರ ಹಕ್ಕುಗಳನ್ನು ದಮನಿಸುತ್ತಿದ್ದರೆ ಇನ್ನೊಂದು ಸರಕಾರ ಅವರಿಗೆ ಎಲ್ಲವನ್ನೂ ಕೊಟ್ಟು ಇತರರ ಹಕ್ಕನ್ನು ದಮನಿಸುತ್ತದೆ.

ಇದಕ್ಕೆ ಕಾರಣವೇನೆಂದರೆ ಮನುಷ್ಯನು ಭಾವನೆಗಳಿಗೆ ಒಳಗಾಗಿರುತ್ತಾನೆ. ಅವನು ಕಾನೂನು ಜಾರಿಗೆ ತಂದರೆ ತನ್ನ ಭಾವನೆಗಳಿಗೆ ಪ್ರಾಮುಖ್ಯತೆ ಕೊಡುತ್ತಾನೆ ಸರ್ವರ ಭಾವನೆಗಳನ್ನು ಲೆಕ್ಕಿಸಲು ಸಾಧ್ಯವಿಲ್ಲ. ಒಬ್ಬ ಬ್ರಹ್ಮಚಾರಿಯೂ ಲೋಕದಿಂದ ಬೇಸತ್ತು ಅದನ್ನೇ ಸತ್ಕ ಎಂದು ಭಾವಿಸಿದರೆ ಒಬ್ಬ ಲೌಕಿಕವಾದಿಯು ಲೌಕಿಕ ಪ್ರಗತಿಯನ್ನೇ ಸತ್ಕರ್ಮ ಎನ್ನುತ್ತಾನೆ. ಈ ನ್ಯೂನತೆಗಳಿಲ್ಲದ ಶಿಕ್ಷಣವನ್ನು ನೀಡಲು ಮನುಷ್ಯನನ್ನು ಸೃಷ್ಟಿಸಿದ ಅಲ್ಲಾಹನಿಗೆ ಮಾತ್ರ ಸಾಧ್ಯ, ಅವನು ಸರ್ವರ ಭಾವನೆಗಳನ್ನು ಬಲ್ಲವನಾಗಿದ್ದಾನೆ. ಅವನೇ ಸರ್ವರಿಗೆ ತಕ್ಕುದಾದ ನ್ಯಾಯ ಕೊಡಬಲ್ಲನು.

**(ತಫ್ಸೀರ್ ಕಬೀರ್, ಸಂಪುಟ-4, ಪುಟ-133 ಮುದ್ರಣ 2010 ಖಾದಿಯಾನ್)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ISERLOHN ನಡುವಿನ ದೂರ 203 ಕಿ.ಮೀ ಇದೆ. ಒಂದು ಗಂಟೆ 55 ನಿಮಿಷದ ಪ್ರಯಾಣದ ನಂತರ 12 ಗಂಟೆ 40 ನಿಮಿಷಕ್ಕೆ VIERJAHRESZEITEN ಹೋಟೆಲಿಗೆ ಆಗಮಿಸಿದರು. ಮೊದಲೇ ಆಯೋಜಿತ ಕಾರ್ಯಕ್ರಮದನ್ವಯ ಅಡಿಪಾಯ ಸಮಾರಂಭಕ್ಕಾಗಿ ಇಲ್ಲಿ ಸ್ವಲ್ಪ ಹೊತ್ತು ತಂಗುವ ಏರ್ಪಾಡು ಮಾಡಲಾಗಿತ್ತು.

ಒಂದು ಗಂಟೆ 5 ನಿಮಿಷಕ್ಕೆ ಹುಝೂರ್ ಅನ್ವರ್ ಇಲ್ಲಿಂದ ಬೈತುಸ್ಸಲಾಂ ಮಸೀದಿಯ ಅಡಿಪಾಯಕ್ಕಾಗಿ ತೆರಳಿದರು. ಈ ಭೂಭಾಗ ISERLOHN ನಗರದ ಒಂದು ಜನನಿಬಿಡ ಭಾಗದಲ್ಲಿದೆ.

ಹುಝೂರ್ ಅನ್ವರ್ ಹೋಟೆಲಿನಿಂದ ತೆರಳಿದಾಗ ಪೋಲೀಸರ ಎರಡು ಮೋಟಾರ್ ಸೈಕಲ್ ಸವಾರರು ತಂಡವನ್ನು ಹಿಂಬಾಲಿಸಿದರು. ಐದು ನಿಮಿಷದ ಪ್ರಯಾಣದ ನಂತರ ಹುಝೂರ್ ಅನ್ವರ್‌ರ ವಾಹನ ಅಲ್ಲಿಗೆ ತಲುಪಿದಾಗ ಸ್ಥಳೀಯ ಜಮಾಅತಿನ ಸ್ತ್ರೀ ಮತ್ತು ಪುರುಷರು, ಮಕ್ಕಳು ತಮ್ಮ ಪ್ರೀತಿಯ ಇಮಾಮರಿಗೆ ಭವ್ಯವಾದ ಸ್ವಾಗತ ಕೋರಿದರು. ಸ್ಥಳೀಯ ಜಮಾಅತ್ ಬಾಂಧವರು ಮುಂಜಾನೆಯಿಂದಲೇ ತಮ್ಮ ಪ್ರೀತಿಯ ಇಮಾಮರ ನಿರೀಕ್ಷೆಯಲ್ಲಿದ್ದರು. ಇಂದು ಅವರಿಗೆ ಸಂತಸ ಹರ್ಷದ ದಿನವಾಗಿತ್ತು. ಅವರ ಈ ಊರಿನಲ್ಲಿ ಹುಝೂರ್ ಅನ್ವರ್ ಅವರ ಮೊದಲ

ಪಾದಾರ್ಪಣವಾಗಿತ್ತು. ಎಲ್ಲರೂ ಅಮಿತ ಸಂತೋಷದಲ್ಲಿದ್ದರು. ಜಮಾಅತ್ ಬಾಂಧವರು ಉಚ್ಚಸ್ವರದಲ್ಲಿ ಘೋಷಣೆಗಳನ್ನು ಹಾಕುತ್ತಿದ್ದರು. ಯುವಕ ಯುವತಿಯರು ಗುಂಪುಕಟ್ಟಿ ಸ್ವಾಗತ ಗೀತೆಗಳನ್ನು ಹಾಡುತ್ತಿದ್ದರು.

ಸದರಿ ಸ್ಥಳೀಯ ಜಮಾಅತಿನ ಅಧ್ಯಕ್ಷರಾದ ಮುಕರ್ರಮ್ ರವೂಫ್ ಅಹ್ಮದ್ ಸಾಹಿಬ್ ಮತ್ತು ಸಂಘಟನೆಯ ಮುಬಲ್ಲಿಗರು ಸಫೀರುರ್ರಹ್ಮಾನ್ ಸಾಹಿಬ್ ನಾಸಿರ್ ಹುಝೂರರಿಗೆ ಹಸ್ತಲಾಘವಮಾಡಿ ಸ್ವಾಗತ ಕೋರಿದರು.

ಅನಂತರ ಹುಝೂರ್ ಅನ್ವರ್ ಮಾರ್ಕಿಗೆ ಆಗಮಿಸಿದರು. ಅಲ್ಲಿ ಸಮಾರಂಭದ ಆರಂಭ ಪವಿತ್ರ ಖುರ್‌ಆನ್‌ನ ಪಠಣದೊಂದಿಗೆ ಆಯಿತು. ಮುಕರ್ರಮ್ ಸಫೀರುರ್ರಹ್ಮಾನ್ ಸಾಹಿಬ್ ಮುಬಲ್ಲಿಗರು ಖುರ್‌ಆನ್ ಪಠಿಸಿದರು. ಮತ್ತು ಅಝೀಝುಮ್ ಸಆದತ್ ಅಹ್ಮದ್ ಸಾಹಿಬ್ ಅದರ ತರ್ಜುಮೆ ಪ್ರಸ್ತುತಪಡಿಸಿದರು.

**ಅಮಿರ್ ಸಾಹಿಬ್ ಜರ್ಮನಿಯರ ಸಂಬೋಧನೆ**

ಅನಂತರ ಮುಕರ್ರಮ್ ಅಮೀರ್ ಸಾಹಿಬ್ ಜರ್ಮನಿ ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸಿದರು. ಅಮಿರ್ ಸಾಹಿಬರು ಈ ನಗರದ ಪರಿಚಯದಲ್ಲಿ ಹೇಳಿದರು. ISERLOHN ಈ ನಗರವು ಜರ್ಮನಿಯ ಒಂದು ವಿಶೇಷ ಕ್ಷೇತ್ರವಾದ RUHRGEBIET ಬದಿಯಲ್ಲಿ ಸ್ಥಿರವಾಗಿದೆ. ಈ ನಗರ ಪ್ರೊಟೆಸ್ಟಂಟ್ ಚರ್ಚಿನ ಪಶ್ಚಿಮ ಕ್ಷೇತ್ರದ ಕೇಂದ್ರವಾಗಿದೆ. ಈ ನಗರದಲ್ಲಿ ಮೊದಲಿನಿಂದಲೇ ಮುಸಲ್ಮಾನರ ಮೂರು ಮಸೀದಿಗಳಿವೆ ನಾವು ಇಗ ನಾಲ್ಕನೆಯ ಮಸೀದಿಯ ಅಡಿಗಲ್ಲು ಹಾಕುತ್ತಿದ್ದೇವೆ.

ಈ ನಗರದಲ್ಲಿ 1992 ರಂದು ಜಮಾಅತಿನ ಸ್ಥಾಪನೆಯಾಯಿತು. ಒಂದು ಸಭಾಂಗಣವನ್ನು ಬಾಡಿಗೆಗೆ ಪಡೆದು ಜಮಾಅತಿನ ಕಾರ್ಯಕ್ರಮಗಳನ್ನು ನಡೆಸುತ್ತಿದ್ದೆವು. ಜಮಾಅತಿನ ಸಂಖ್ಯೆ ಹೆಚ್ಚಾದ ಕಾರಣ ಈ ಸಭಾಂಗಣ ಸಣ್ಣದಾಗಿದೆ.

ಮಸೀದಿಗಾಗಿ ಈ ಸ್ಥಳವನ್ನು 2009 ರಲ್ಲಿ ನೋಡಿದ್ದೆವು. ಮತ್ತು ನವೆಂಬರ್ 2010 ರಲ್ಲಿ ಅದರ ಒಳಂಬಡಿಕೆ ಆಯಿತು. ಈ ಭೂಭಾಗ 1615 ಚ.ಮೀ ಇದೆ ಮತ್ತು 96,715 ಯೂರೋದಲ್ಲಿ ಖರೀದಿಸಲಾಯಿತು. ಈ ಮಸೀದಿಯಲ್ಲಿ ಪುರುಷರ ಮತ್ತು ಮಹಿಳೆಯರ ನಮಾಝಿನ ಸಭಾಂಗಣವಲ್ಲದೇ 12 ಮೀಟರ್ ಎತ್ತರದ ಒಂದು ಮೀನಾರ್ (ಗೋಪುರ) ನಿರ್ಮಾಣವಾಗುವುದು. ಗುಂಬಜಿನ ವಿಸ್ತೀರ್ಣ 6 ಮೀಟರ್ ಆಗಿರುವುದು. 13 ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಇದೆ.

**ಮುಸ್ಲಿಮೇತರ ಜರ್ಮನ್ ವರಿಷ್ಠರ ಸಂಬೋಧನೆ**

ಜರ್ಮನಿಯ ಅಮೀರ್ ಸಾಹಿಬರ ಪರಿಚಯ ಭಾಷಣದ ನಂತರ ಕೌಂಟಿ ಕಮೀಷನರ್ Mr. THOMAS GEMKE ಸಾಹಿಬ್ ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸಿದರು.

ಅವರು ಹೇಳಿದರು. ಗೌರವಾನ್ವಿತರಾದ ಖಲೀಫತುಲ್ ಮಸೀಹ್ ನಿಮ್ಮ ಸಮ್ಮುಖದಲ್ಲಿ ಮಾತನಾಡುವ ಅವಕಾಶ ದೊರೆತದ್ದು ನನ್ನ ಸೌಭಾಗ್ಯವಾಗಿದೆ. ನಾನು ಇಲ್ಲಿಯ ಜಿಲ್ಲೆಯ ವತಿಯಿಂದಲು ಖಲೀಫತುಲ್ ಮಸೀಹರಿಗೆ ಸ್ವಾಗತ ಕೋರುತ್ತೇನೆ.

ISERLOHN ಇದ್ದ ನಗರದ ಕ್ಷೇತ್ರವು ಅತ್ಯಂತ ಸುಂದರವಾಗಿದೆ. ಈ ನಗರದಲ್ಲಿ ವಿವಿಧ ರೀತಿಯ ಕಾರ್ಖಾನೆಗಳಿವೆ. ಅತ್ಯಂತ ಸಂತೋಷದ ಮಾತೇನೆಂದರೆ ಈ ಕ್ಷೇತ್ರದಲ್ಲಿ ಹೊಸದಾಗಿ ಮಸೀದಿ ನಿರ್ಮಾಣವಾಗುತ್ತಿರುವುದು. ಇದು ಪ್ರಥಮ ಮಸೀದಿಯಾಗಿದೆ. ಅವರು ಹೇಳಿದರು. ವಿವಿಧ ಸಂಸ್ಕೃತಿ ಮತ್ತು ಸಮುದಾಯಗಳ ಜನರು ಒಂದು ಸ್ಥಳದಲ್ಲಿ ಇರುವುದಾದರೆ ಎಲ್ಲರೂ ಪರಸ್ಪರ ಪ್ರೀತಿ ಗೌರವದಿಂದ ವರ್ತಿಸುವುದು ಅನಿವಾರ್ಯವಾಗಿದೆ. ಎಲ್ಲರೂ ಸಮಾನರು ಮತ್ತು ತಮ್ಮ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕು ಹಾಗೂ ಸ್ವಾತಂತ್ರ್ಯ ಎಲ್ಲರಿಗೂ ಇದೆ. ಇಲ್ಲಿ ಮಸೀದಿ ನಿರ್ಮಾಣಗೊಂಡ ನಂತರ ನಾವೆಲ್ಲರೂ ಒಟ್ಟುಗೂಡಿ ಮಾತನಾಡುವೆವು. ಒಬ್ಬರು ಮತ್ತೊಬ್ಬರಿಗೆ ಗುರುತಿಸುವ ಅವಕಾಶ ದೊರೆಯುವುದು.

ಮತ್ತು ಅವರು ಹೇಳಿದರು. ಮುಸಲ್ಮಾನರು ಇಲ್ಲಿ ಶಾಂತಿಯಿಂದ ಇರಬಯಸುತ್ತಾರೆ ಎಂದರೆ ನಮಗೆ ಸಂತೋಷದ ವಿಷಯವಾಗಿದೆ. ನಾವೆಲ್ಲಾ ಅಹ್ಮದಿಯಾ ಜಮಾಅತಿನ ಧ್ಯೇಯವಾಕ್ಯ. ಪ್ರೀತಿ ಎಲ್ಲರೊಡನೆ ದ್ವೇಷವಿಲ್ಲ ಯಾರೊಡನೆ ಇದರ ಮೇಲೆ ನಡೆದುಕೊಂಡರೆ ಇಡೀ ಲೋಕದಲ್ಲಿ ಶಾಂತಿ ಸ್ಥಾಪನೆಯಾಗಬಹುದಾಗಿದೆ. ಕೊನೆಯಲ್ಲಿ ತಮ್ಮನ್ನು ಇಂದಿನ ಸಭೆಗೆ ಆಮಂತ್ರಿಸಿಕ್ಕೆ ವಂದನೆ ಅರ್ಪಿಸಿದರು.

ಅನಂತರ ರಾಜ್ಯ ಅಸೆಂಬ್ಲಿಯ ಶಾಸಕರಾದ Mr. MICHAEL SCHEFFLER ಸಾಹಿಬ್ ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸುತ್ತಾ ಹೇಳಿದರು.

ಗೌರವಾನ್ವಿತರಾದ ಖಲೀಫತುಲ್ ಮಸೀಹ್! ಮೊಟ್ಟಮೊದಲಿಗೆ ತಾವು ನನ್ನನ್ನು ಇಲ್ಲಿಗೆ ಆಹ್ವಾನಿಸಿದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾನು ಬಹಳ ಸಂತೋಷದಿಂದ ಇಲ್ಲಿ ಆಗಮಿಸಿರುತ್ತೇನೆ. ನಾನು ಏಕೆ ಇಲ್ಲಿ ಸಂತೋಷದಿಂದ ಬಂದಿರುತ್ತೇನೆ ಎಂದರೆ ಅಹ್ಮದಿಯಾ ಜಮಾಅತ್ ನಮ್ಮ ನಗರದಲ್ಲಿ ಶಾಂತಿ ಸ್ಥಾಪನೆ ಮಾಡಲು, ನಗರದ ಅಭಿವೃದ್ಧಿಗಾಗಿ ಪ್ರಯತ್ನಶೀಲವಾಗಿರುತ್ತದೆ. ಅಲ್ಲದೆ ಜಮಾಅತ್ ಕೆಲ ದಿನಗಳ ಮುಂಚೆ ಸಸ್ಯ ನೆಡುವ ಕಾರ್ಯಕ್ರಮ ಹಮ್ಮಿಕೊಂಡಿತ್ತು.

ಅವರು ಹೇಳಿದರು ನಿಮ್ಮ ಸಂದೇಶ ಶಾಂತಿಯ ಸಂದೇಶವಾಗಿದೆ. ಯಾರು ಇಲ್ಲಿ ಶಾಂತಿಯ ಸಂದೇಶ ಸಾರಿ ನಡೆಯುತ್ತಾರೆ ಹಾಗೂ ವಾಸಿಸುತ್ತಾರೆ. ನಾವು ಅವರಿಗೆ ಸ್ವಾಗತಿಸುತ್ತೇವೆ.

ಮತ್ತು ಅವರು ಹೇಳಿದರು. ಸಮಾನತೆ, ಗೌರವ ಮತ್ತು ಏಕತೆ ಅತ್ಯಂತ ಮುಖ್ಯವಾಗಿವೆ ಮತ್ತು ಅದು ನಾವು ಅಹ್ಮದಿಯಾ ಮುಸ್ಲಿಂ ಜಮಾಅತಿನಲ್ಲಿ ಕಾಣುತ್ತಿದ್ದೇವೆ.

ಅವರು ಹೇಳಿದರು. ಸಮಾನತೆ, ಗೌರವ ಮತ್ತು ಏಕತೆ ಅತ್ಯಂತ ಮುಖ್ಯವಾಗಿವೆ ಮತ್ತು ಅದು ನಾವು ಅಹ್ಮದಿಯಾ ಮುಸ್ಲಿಂ ಜಮಾಅತಿನಲ್ಲಿ ಕಾಣುತ್ತಿದ್ದೇವೆ.

ಅವರು ಹೇಳಿದರು. ನಾನು ಎಲ್ಲಾ ಪ್ರಜೆಗಳ ವತಿಯಿಂದ ಅಹ್ಮದಿಯಾ ಜಮಾಅತಿಗೆ ಸುಸ್ವಾಗತ ಹೇಳುವೆ ಮತ್ತು ನಾವು ಈಗ ಮಸೀದಿಯ ಉದ್ಘಾಟನಾ ಸಮಾರಂಭಕ್ಕೆ ಕಾಯುವೆವು. ಅವರು ಹೇಳಿದರು. ಮಸೀದಿ ನಿರ್ಮಾಣದ ಉದ್ದೇಶ ತಾವು ಇಲ್ಲಿ ಶಾಂತಿಯಿಂದ ಒಗ್ಗೂಡಿ ಇರುವುದಾಗಿದೆ. ಅದೇ ರೀತಿ ನಾವು ಏಕತೆ ಮೂಡಿಸಬಹುದಾಗಿದೆ.

ಅವರು ಹೇಳಿದರು. ಜಮಾಅತ್ ಐಕ್ಯತೆಯಲ್ಲಿ ಮುನ್ನಡೆಯುತ್ತಿದೆ. ಅವರ ಧ್ಯೇಯ – Love For ALL, Hatred For None ಆಗಿದೆ. ಅದು ಅದರ ಸ್ಪಷ್ಟ ನಿಲುವುವಾಗಿದೆ. ಅದಲ್ಲದೇ ಜಮಾಅತ್ ತನ್ನ ಖುತುಬ ಜುಮುಅ ಜರ್ಮನ್ ಭಾಷೆಯಲ್ಲಿ ಪ್ರಸ್ತುತಪಡಿಸುತ್ತದೆ. ಅವರು ಹೇಳಿದರು. ಇಲ್ಲಿ ಜರ್ಮನಿಯಲ್ಲಿ 4.1 ಮಿಲಿಯನ್ ಮುಸ್ಲಿಂ ಜನಸಂಖ್ಯೆ ಇದೆ ಮತ್ತು 210 ಮಸೀದಿಗಳು ಇಲ್ಲಿವೆ. ಈ ಕ್ಷೇತ್ರದಲ್ಲಿ 153 ವಿವಿಧ ಸಮುದಾಯದವರು ವಾಸಿಸುತ್ತಾರೆ ಮತ್ತು ಎಲ್ಲರೂ ಶಾಂತಿ ಪ್ರೀತಿಯಿಂದ ಇರುವವರಾಗಿದ್ದಾರೆ. ಜನರು ಪರಸ್ಪರ ಬಿಚ್ಚುಮನಸ್ಸಿನಿಂದ ವ್ಯವಹರಿಸುವುದು ತುಂಬ ಮುಖ್ಯವಾಗಿದೆ. ಅದರಲ್ಲಿ ಮಸೀದಿಗಳ ಮತ್ತು ಚರ್ಚ್‌ಗಳ ವಿಶೇಷ ಪಾತ್ರವಿದೆ. ಅವರು ಯುವಕರಿಗೆ ಯಾವ ರೀತಿ ಧರ್ಮದ ಹತ್ತಿರ ತರಬೇಕಾಗಿದೆ ಮತ್ತು ಹೇಗೆ ಪರಸ್ಪರ ಶಾಂತಿ ಹಾಗೂ ಸಮಾನತೆ ತೋರಬೇಕು ಎಂದು ಕಲಿಸಬೇಕಾಗಿದೆ.

ಅನಂತರ HEMER ನಗರದ ಪೌರರಾದ (ಮೇಯರ್) Mr. MICHAEL ESKEN ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸಿದರು. ಮೇಯರ್ ಈ ಮಾತಿನ ಕುರಿತು ತಮ್ಮ ಸಂತೋಷ ವ್ಯಕ್ತಪಡಿಸಿದರು. ಅಹ್ಮದಿಯಾ ಜಮಾಅತ್ ಎಲ್ಲವೂ ಮುಕ್ತವಾಗಿ ಕಾರ್ಯ ನಿರ್ವಹಿಸುತ್ತಿದೆ. ತಮ್ಮ ಈ ಕಾರ್ಯಕ್ರಮ ಸಹ ಗೌಪ್ಯವಾಗಿ ನಡೆಸುತ್ತಿಲ್ಲ, ಬದಲು ಎಲ್ಲರೊಂದಿಗೆ ಸೇರಿ ಈ ಕಾರ್ಯಕ್ರಮ ಆಯೋಜಿಸಿದೆ. ನನ್ನನ್ನು ಆಮಂತ್ರಿಸಿದ್ದಕ್ಕೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಮೇಯರ್ ಹೇಳಿದರು. ಇಲ್ಲಿ ಮಸೀದಿಗಾಗಿ ಜಾಗ ಹುಡುಕುತ್ತಿದ್ದಾರೆ ಎಂದು ತಿಳಿದು ನೆರೆ ಹೊರೆಯರು ಆತಂಕಪಡಲು ಪ್ರಾರಂಭಿಸಿದರು. ಆದರೆ ಅದಕ್ಕಾಗಿ ಜಮಾಅತಿನ ವತಿಯಿಂದ ಹಲವು ಸಭೆಗಳನ್ನು ಆಯೋಜಿಸಿ ಜನರಿಗೆ ತಿಳುವಳಿಕೆ ನೀಡಿದರು. ಆ ಮೂಲಕ ಜನರ ಸಂಶಯಗಳನ್ನು ನಿವಾರಿಸಿದರು ಮತ್ತು ಅವರ ಆತಂಕ ದೂರವಾಯಿತು. ಇಸ್ಲಾಮಿನ ಬಗ್ಗೆ ಇದ್ದ ತಪ್ಪು ಕಲ್ಪನೆಯನ್ನು ಸರಿಪಡಿಸಲಾಯಿತು. ಹೀಗೆ ದ್ವೇಷವು ಪ್ರೀತಿಯಲ್ಲಿ ಪರಿವರ್ತನೆಗೊಂಡಿತು. ಜಮಾಅತ್ ಮಸೀದಿ ನಿರ್ಮಾಣ ಮಾಡುವ ಮೂಲಕ ಜನರ ಆತಂಕ ದೂರ ಮಾಡುತ್ತಿದೆ.

ಅವರು ಹೇಳಿದರು. ಕೊನೆಯಲ್ಲಿ ನಾನು ಮತ್ತೊಮ್ಮೆ ನಿಮ್ಮೆಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ.

**ಹುಝೂರ್ ಅನ್ವರ್(ಅಬಅ) ಅವರ ಸಂಬೋಧನೆ.**

* ಅನಂತರ 1:45 ನಿಮಿಷಕ್ಕೆ ಹುಝೂರ್ ಅನ್ವರ್ ಸಂಬೋಧಿಸಿದರು.

"ತಶಹುದ್ ತವೂಝ್ ಮತ್ತು ತಸ್ಮಿಯಾ ನಂತರ ಹುಝೂರ್ ಅನ್ವರ್ ನುಡಿದರು. ಎಲ್ಲ ಗೌರವಾನ್ವಿತ ಅತಿಥಿಗಳಿಗೆ, ಅಸ್ಸಲಾಮು ಅಲೈಕುಂ ವ ರಹಮತುಲ್ಲಾಹ್ ವ ಬರಕಾತುಹು!

ಅಲ್ಲಾಹನ ಅನುಗ್ರಹದಿಂದ ಇಲ್ಲಿ ಅಹ್ಮದಿಯಾ ಜಮಾಅತಿಗೆ ಮಸೀದಿಯ ಅಡಿಗಲ್ಲು ಹಾಕುವ ಸೌಭಾಗ್ಯ ಇಂದು ದೊರೆಯುತ್ತಿದೆ. ಅಮೀರ್ ಸಾಹೇಬರು ತಮ್ಮ ಪರಿಚಯ ಭಾಷಣದಲ್ಲಿ ಒಂದು ಮಾತನ್ನು ಹೇಳಿದರು. ಈ ಕ್ಷೇತ್ರವು ಬಹು ಸುಂದರವಾಗಿದೆ ಎಂದು. ಅದು ಸರಿಯಾದ

ಮಾತೇ ಆಗಿದೆ. ಏಕೆಂದರೆ ನಾನು ರಸ್ತೆಯಲ್ಲಿ ಬರುತ್ತಿರುವಾಗಲೂ ಮತ್ತು ಇಲ್ಲಿ ಎಷ್ಟೆಲ್ಲ ಏನೆಲ್ಲ ನೋಡಿದ್ದೇನೆ. ರಸ್ತೆಯಲ್ಲಿ ಒಂದು ಹೋಟೆಲ್‌ನಲ್ಲಿ ತಂಗಿದ್ದೆವು ಅಲ್ಲಿನ ಐದನೆಯ ಮಹಡಿಯಿಂದ ನಾನು ನೋಡಿದೆ. ಇದು ನಿಜವಾಗಿಯೂ ಬಹು ಸುಂದರ ಕ್ಷೇತ್ರವಾಗಿದೆ. ಅದರ ನಿವಾಸಿಗಳು ಸಹ ಸುಂದರವಾಗಿರಬೇಕು ಆಗಲೆ ಈ ಕ್ಷೇತ್ರದ ಸುಂದರತೆ ಇನ್ನಷ್ಟು ಹೆಚ್ಚುತ್ತದೆ. ಸುಂದರತೆ ಎಂದರೆ ಕೇವಲ ರೂಪಗಳ ಸುಂದರತೆಯಲ್ಲ, ಬದಲು ಚರಿತ್ರೆಯು ಸುಂದರ ವಾಗಿರಬೇಕಾಗಿದೆ. ಸಾಮಾನ್ಯವಾಗಿ ಇಲ್ಲಿಯ ಜನರಲ್ಲಿ ಉತ್ತಮ ಚರಿತ್ರೆಯುವರಿದ್ದಾರೆ. ನಿಸ್ಸಂಶಯವಾಗಿ ಅಲ್ಲಾಹನು ನೈಸರ್ಗಿಕ ಸುಂದರತೆಯನ್ನು ದಯಪಾಲಿಸಿದ್ದಾನೆ. ಅದರೊಂದಿಗೆ ಈ ಜನರ ಚರಿತ್ರೆಯ ಸುಂದರತೆಯು ಈ ಕ್ಷೇತ್ರವನ್ನು ಇನ್ನಷ್ಟು ಸುಂದರಗೊಳಿಸಿದೆ. ಹಾಗೂ ನಿಮ್ಮನ್ನು ಸುಂದರವಾಗಿಸಿದ್ದಾನೆ.

ಹುಝೂರ್ ಅನ್ವರ್ ಹೇಳಿದರು. ಕೆಲವೊಮ್ಮೆ ಮನುಷ್ಯನು ತಮ್ಮ ಪ್ರಯತ್ನದಿಂದ ಸುಂದರತೆಯನ್ನು ಹೆಚ್ಚಿಸುತ್ತಾನೆ, ಕಟ್ಟಡಗಳು ಸಹ ಕ್ಷೇತ್ರವನ್ನು ಸುಂದರಗೊಳಿಸುತ್ತದೆ ಅಮೀರ್ ಸಾಹಿಬರು ಹೇಳಿದರು. ಇಲ್ಲಿ ಒಂದು ಸುಂದರವಾದ ಮಸೀದಿಯ ನಿರ್ಮಾಣದ ಭರವಸೆ ಹೊಂದಿದ್ದೇನೆ. ನಾನು ನಿಮ್ಮನ್ನು ಇದು ಸಹ ಹೇಳಬಯಸುತ್ತೇನೆ. ಕಟ್ಟಡದ ಸುಂದರತೆ ಒಂದು ಬಾಹ್ಯ ಸುಂದರತೆಯಾಗಿದೆ, ಅದಕ್ಕಿಂತ ಎಷ್ಟೋ ಪಟ್ಟು ಸುಂದರತೆ ಅಲ್ಲಾಹನು ನಮಗೆ ತನ್ನ ಪ್ರಕೃತಿಯ ದೃಶ್ಯಗಳಲ್ಲಿ ನೀಡಿದ್ದಾನೆ. ಆದುದರಿಂದ ಮನುಷ್ಯನ ಪ್ರಯತ್ನದಿಂದ ಒಂದು ಸುಂದರ ಕಟ್ಟಡ ನಿರ್ಮಾಣ ಮಾಡುವುದು ದೊಡ್ಡ ಮಾತಲ್ಲ. ಯಾವುದೇ ಆರಾಧನಾ ಸ್ಥಳದ ನೈಜ ಸುಂದರತೆ ನಿರ್ಮಾಣ ಮಾಡುವ ಜನರ ಮೇಲೆ ಅವಲಂಬಿತವಾಗಿದೆ. ನನಗೆ ಭರವಸೆ ಇದೆ. ಇನ್‌ಶಾಅಲ್ಲಾಹ್ ಅಹ್ಮದಿಯಾ ಜಮಾಅತಿ ಸದಸ್ಯರು ಈ ಮಸೀದಿಯ ನಿರ್ಮಾಣವನ್ನು ಮಾಡುತ್ತಿದ್ದಾರೆ. ಈ ಕಟ್ಟಡದ ಸುಂದರತೆಯನ್ನು ತಮ್ಮ ಚರಿತ್ರೆಯ ಸುಂದರತೆಯಿಂದ ಇನ್ನಷ್ಟು ಬೆರಗು ನೀಡುವರು. ಅದರಿಂದ ಇಲ್ಲಿಯ ಸುಂದರ ಚರಿತ್ರೆಯ ಜನರ ಸುಂದರತೆಯಲಿ ಇನ್ನಷ್ಟು ಹೆಚ್ಚಳ ಕಾಣಬಹುದು.

ಹುಝೂರ್ ಅನ್ವರ್ ಹೇಳಿದರು. ಮಸೀದಿಗಳ ಸುಂದರತೆಯು ಆರಾಧನೆಯ ಹಕ್ಕು ಪಾಲಿಸುವುದರಿಂದ ಲಾಭವಾಗುತ್ತದೆ. ಮಸೀದಿಯ ನಿರ್ಮಾಣದ ಉದ್ದೇಶವೇ ಅಲ್ಲಾಹನ ಆರಾಧನೆ ಮಾಡುವುದಾಗಿದೆ. ಇದು ಅಲ್ಲಾಹನ ಗೃಹವಾಗಿದೆ. ಹಾಗೆ ಜನರು ಆರಾಧನೆಯ ಹಕ್ಕನ್ನು ಪಾಲಿಸುವವರಾದರೆ ಮಾತ್ರ ನಿಜವಾದ ಸುಂದರತೆ ಸ್ಪಷ್ಟವಾಗುತ್ತದೆ. ತನ್ನನ್ನು ಸೃಷ್ಟಿಸಿದ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುವವರಾಗಬೇಕು. ಅದರ ಜೊತೆಯಲ್ಲಿ ಮಾನವೀಯತೆ ಇದೆ. ಅಲ್ಲಾಹನ ಸೃಷ್ಟಿಯ ಹಕ್ಕುಗಳನ್ನು ಸಹ ಪಾಲಿಸುವವರಾಗಬೇಕು. ಕೇವಲ ಆರಾಧನೆಯ ಹಕ್ಕು ಪಾಲಿಸುವುದರಿಂದ ಮಸೀದಿಯ ಉದ್ದೇಶ ಈಡೇರಿಸಿದಂತಾಗುವುದಿಲ್ಲ. ಮಾನವೀಯತೆ ಮೌಲ್ಯಗಳನ್ನು ಉನ್ನತ ಮಟ್ಟದವರೆಗೆ ಗಮನಿಸುವವರಾಗಬೇಕು. ನನ್ನ ಧರ್ಮದಲ್ಲಿ ಮಾನವೀಯತೆಯ ಮೌಲ್ಯಗಳಿಗೆ ತುಂಬ ಮಹತ್ವವಿದೆ. ಅದರ ಹೊರತು ಧರ್ಮ ಅಪೂರ್ಣವಾಗಿದೆ.

ಹುಝೂರ್ ಅನ್ವರ್ ಹೇಳಿದರು. ನನಗೆ ತುಂಬ ಸಂತೋಷವಾಯಿತು. ಈ ಸುಂದರ ಮಸೀದಿಯಲ್ಲಿ ಬರುವ ಅಹ್ಮದಿಯರು ತನ್ನ ಸೃಷ್ಟಿಕರ್ತನ ಆರಾಧನೆ ಮಾಡುವ ಜೊತೆಯಲ್ಲಿ ಅವನ ಸೃಷ್ಟಿಯ ಹಕ್ಕುಗಳನ್ನು ಸಹ ಪಾಲಿಸುವವರಾಗಬೇಕು. ಅವರ ಹಕ್ಕುಗಳನ್ನು ಪಾಲಿಸುವುದರೊಂದಿಗೆ ಅದನ್ನು ಸುಂದರಗೊಳಿಸಬೇಕು. ಈ ಸುಂದರತೆ ಉತ್ಪನ್ನವಾದರೆ ಮತ್ತೆ ಕೆಲ ತಪ್ಪು ಕಲ್ಪನೆಗಳಿಂದಾಗಿ, ಕೆಲ ಸ್ಥಳಗಳಲ್ಲಿ ಒಂದಿಷ್ಟು ವಿರೋಧವು ಆಯಿತು. ಅದರ ಬಗ್ಗೆ ನಮ್ಮ ನ್ಯಾಷನಲ್ ಅಮೀರ್ ಸಾಹಿಬರು ಹೇಳಿದ್ದಾರೆ. ಅದು ತಾನಾಗಿಯೇ ಮಸೀದಿ ನಿರ್ಮಾಣದ ಜೊತೆಯಲ್ಲಿಯೇ ಅಂತ್ಯಗೊಳ್ಳುವುದು. ಇನ್‌ಶಾ ಅಲ್ಲಾಹ್ ಹಾಗೆಯೇ ಆಗುವುದು ಎಂದು ನಾನು ಭರವಸೆ ಹೊಂದಿದ್ದೇನೆ.

ಹುಝೂರ್ ಅನ್ವರ್ ಹೇಳಿದರು. ಅಂತೂ ನಾನು ಅದರಲ್ಲಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸ ಬಯಸುತ್ತೇನೆ. ಅದರಲ್ಲಿ ಮೇಯರ್ ಸಾಹಿಬರು ಶಾಮೀಲಾಗಿದ್ದಾರೆ. ಅವರ ಕೌನ್ಸಿಲ್ ಸಹ ಶಾಮೀಲಾಗಿದೆ. ಇಲ್ಲಿಯ ಜನರು ಶಾಮೀಲಾಗಿದ್ದಾರೆ. ಅವರೆಲ್ಲರೂ ಈ ಮಸೀದಿ ನಿರ್ಮಾಣದ ಅನುಮತಿ ಪಡೆಯುವಲ್ಲಿ ತಮ್ಮ ಪಾತ್ರ ವಹಿಸಿರುತ್ತಾರೆ. ಯಾವ ಉನ್ನತ ಮಟ್ಟದ ನೈತಿಕತೆಯನ್ನು ನೀವು ಪ್ರದರ್ಶಿಸಿದ್ದೀರೋ ಅದು ನಿರಂತರ ಜಾರಿಯಲ್ಲಿರಲಿ ಎಂಬುದು ನನ್ನ ಪ್ರಾರ್ಥನೆಯಾಗಿದೆ. ಅಹ್ಮದಿಯಾ ಜಮಾಅತಿನ ಸದಸ್ಯರು ಮತ್ತು ಸ್ಥಳೀಯ ಜನರ ಸಂಬಂಧಗಳು ಇನ್ನಷ್ಟು ಬಲಗೊಳ್ಳಲಿ. ಅಹ್ಮದಿಯಾ ಜಮಾಅತಿನ ಸದಸ್ಯರು ಸಹ ಈ ನಗರದ ಪ್ರಜೆಗಳಾಗಿದ್ದಾರೆ. ಈ ನೆಲೆಯಲ್ಲಿಯೂ ಅವರ ಕರ್ತವ್ಯಗಳು ಇಲ್ಲಿಯ ನಗರ ಪ್ರಜೆಗಳಂತೆಯೇ ಮತ್ತು ದೇಶದ ಪ್ರಜೆಗಳಂತೆಯೇ ಆಗಿರಬೇಕಾಗಿದೆ. ಇನ್‌ಶಾಅಲ್ಲಾಹ್‌ತಾಲಾ ಅಹ್ಮದಿಯಾ ಜಮಾಅತ್ . ನಾನು ಮೊದಲು ಹೇಳಿದಂತೆಯೇ, ತಮ್ಮ ಪಾತ್ರ ವಹಿಸಬೇಕು ನನ್ನ ಸಂತೋಷವು ಅದರಲ್ಲಿರುವುದು. ನಾನು ಭರವಸೆ ಹೊಂದಿದ್ದೇನೆ. ಇನ್‌ಶಾಅಲ್ಲಾಹ್ ಅವರು ಈ ಪಾತ್ರ ವಹಿಸುವರು. ಪರಸ್ಪರ ಸಂಬಂಧಗಳಲ್ಲಿ ಕೆಲವರಿಗೆ ಆತಂಕವಿದ್ದರೆ ಇನ್‌ಶಾಅಲ್ಲಾಹ್ ಆ ಆತಂಕಗಳನ್ನು ದೂರ ಮಾಡಲು ಭಗೀರಥ ಪ್ರಯತ್ನ ಮಾಡುವರು. ಇನ್‌ಶಾಅಲ್ಲಾಹ್ ಇದ್ದ ಅಲ್ಪ ಸ್ವಲ್ಪ ವಿರೋಧಗಳು ಸಹ ಅಂತ್ಯಗೊಳ್ಳುವುದು.

ಹುಝೂರ್ ಅನ್ವರ್ ಹೇಳಿದರು. ಕಮೀಷನರ್ ಸಾಹೇಬರು ಒಂದು ಬಹಳ ಒಳ್ಳೆಯ ಮಾತನ್ನು ಹೇಳಿದ್ದಾರೆ. ಇಲ್ಲಿ ಪ್ರತಿಯೊಬ್ಬರಿಗೆ ಮಾತನಾಡುವ ಸ್ವಾತಂತ್ರ್ಯವಿದೆ. ತಮ್ಮ ಅಭಿಪ್ರಾಯಗಳನ್ನು ಸ್ವತಂತ್ರವಾಗಿ ವ್ಯಕ್ತಪಡಿಸಬಹುದು. ಅದರ ಅನುಮತಿ ಪ್ರತಿಯೊಬ್ಬ ನಾಗರಿಕನಿಗಿದೆ. ನಿಸ್ಸಂಶಯವಾಗಿ ಇರಬೇಕಾಗಿದೆ. ಆದರೆ ನಾವು ಇದರ ಜೊತೆಯಲ್ಲಿ ಹೇಳಬಯಸುವುದೇನೆಂದರೆ ಸ್ವಾತಂತ್ರ್ಯದ ಜೊತೆಯಲ್ಲಿ ಇನ್ನೊಬ್ಬರ ಭಾವನೆಗಳನ್ನು ಗೌರವಿಸುವುದು ಸಹ ಅನಿವಾರ್ಯವಾಗಿದೆ. ಒಂದು ವೇಳೆ ನಾನು ಇತರರ ಭಾವನೆಗಳನ್ನು ಗಮನಿಸಿಲ್ಲವಾದರೆ ಕೇವಲ ತನ್ನ ಸ್ವಾತಂತ್ರ್ಯ ಮಾತ್ರ ಬಯಸುವವನಾದರೆ ಮತ್ತು ಇಂತಹ ಸ್ವಾತಂತ್ರ್ಯದಿಂದ ಕೆಲವೊಮ್ಮೆ ದ್ವೇಷಗಳು ಹುಟ್ಟುತ್ತವೆ. ಪ್ರೀತಿಯ ಪರಿಸರ ಉಂಟುಮಾಡಲು ಸ್ವಾತಂತ್ರ್ಯ ಜೊತೆಯಲ್ಲಿ ಇತರರ ಭಾವನೆಗಳನ್ನು ಸಹ ಗಮನಿಸಬೇಕು. ಇನ್‌ಶಾಅಲ್ಲಾಹ್ ನಾವು ಅಹ್ಮದಿಯಾ ಜಮಾಅತಿನ ಸದಸ್ಯರು ಅದನ್ನು ಎಂದೆಂದಿಗೂ ಪಾಲಿಸುವೆವು. ಮೊದಲಿನಿಂದ ಮಾಡುತ್ತಾ ಬಂದಿದ್ದೇವೆ, ಮುಂದೆಯೂ ಮಾಡುವೆವು. ಅಂತೆಯೇ ಇತರರಿಂದಲೂ ಅದೇ ಭರವಸೆ ಹೊಂದಿದ್ದೇವೆ. ಸ್ವಾತಂತ್ರ್ಯವನ್ನು ಮಿತಿಯಿಲ್ಲದೆ ಹಾಗೆ ಮಾಡಬಾರದು. ಸ್ವಾತಂತ್ರ್ಯದಲ್ಲಿ ಕೆಲವು ನಿಬಂಧನೆಗಳಿರಬೇಕು. ಒಬ್ಬರು ಮತ್ತೊಬ್ಬರ ಭಾವನೆಗಳನ್ನು ಗೌರವಿಸಬೇಕು. ಆಗ ಮಾತ್ರ ಸಮಾಜದಲ್ಲಿ ಶಾಂತಿ ಪ್ರೀತಿಯ ಪರಿಸರ ನಿರ್ಮಾಣವಾಗಬಹುದು.

ಅಲ್ಲಾಹನು ಉಭಯತ್ರರಿಗೂ ಆ ಭಾಗ್ಯ ದಯಪಾಲಿಸಲಿ. ಅವರು ಯಾವುದೇ ಧರ್ಮಕ್ಕೆ ಸಂಬಂಧಿಸಿದವರಾಗಲಿ, ಮುಸ್ಲಿಮರಾಗಲಿ, ಕ್ರೈಸ್ತರಾಗಲಿ, ಯಹೂದ್ಯರಾಗಲಿ, ಅಥವ ಯಾವ ಧರ್ಮದವರಾಗಲಿ, ಮಾನವೀಯ ಮೌಲ್ಯಗಳನ್ನು ಮುಂದಿರಿಸಿಕೊಂಡು ಒಬ್ಬರು ಮತ್ತೊಬ್ಬರ ಭಾವನೆಗಳನ್ನು ಗಮನಿಸಬೇಕು. ಎಂ ಪಿ. ಸಾಹೇಬರು ಸಹ ಹೇಳಿದರು. ಶಾಂತಿಯ ಸಂದೇಶ ಅತ್ಯಂತ ಮುಖ್ಯವಾಗಿದೆ ಎಂದು. ಶಾಂತಿಯ ಸಂದೇಶ ಸಾರುವವರನ್ನು ಇಲ್ಲಿ ತುಂಬು ಹೃದಯದಿಂದ ಸ್ವಾಗತಿಸಲಾಗುತ್ತದೆ. ಇದು ಕೇವಲ ಇಲ್ಲಿಯ ಮಾತಲ್ಲ. ನನ್ನ ಪ್ರಕಾರ ಲೋಕದೆಲ್ಲೆಡೆ ಇಂತಹ ವಿವೇಕಯುತ ಮನುಷ್ಯರು ಇರುವರು. ಶಾಂತಿಯ ಸಂದೇಶವನ್ನು ಪ್ರೀತಿಯ ಸಂದೇಶವನ್ನು ಅಲ್ಲಿಯೂ ಸ್ವಾಗತಿಸಲಾಗುತ್ತದೆ ಮತ್ತು ಸ್ವಾಗತಿಸಬೇಕಾಗಿದೆ. ಅಂತೂ ಈ ನಗರದ ಜನತೆಗೆ ಅಬಿನಂದನೆಗಳನ್ನು ಸಲ್ಲಿಸುತ್ತೇನೆ. ನೀವು ಸಹಿಷ್ಣುತೆ ಮತ್ತು ಶಾಂತಿಯನ್ನು ಪ್ರದರ್ಶಿಸುತ್ತಾ ಅಹ್ಮದಿಯಾ ಜಮಾಅತಿನ ಸದಸ್ಯರಿಗೆ, (ಅವರು ಪ್ರೀತಿ, ಶಾಂತಿಯ ಪ್ರಚಾರ ಮಾಡುವವರಾಗಿದ್ದಾರೆ) ತಮ್ಮ ನಗರದಲ್ಲಿ ಆರಾಧನೆಗೋಸ್ಕರ ಸ್ಥಳಾವಕಾಶ ಮಾಡಿಕೊಟ್ಟು ಅನುಮತಿ ನೀಡಿದ್ದೀರಿ.

**(ಮುಂದುವರಿಯುವುದು)**

**ಆಡಂಬರ ಮತ್ತು ತೋರ್ಪಡಿಕೆಗೋಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.**

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಆಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. **(ಮಲ್‌ಫೂಝಾತ್, ಸಂಪುಟ-3, ಪುಟ-284)**

**(ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 17 February 2022, Issue No. 07

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 06ರ ವರದಿಯ ಉಳಿದ ಭಾಗ)**

* ಇಬ್ರಾಹಿಂ ತ್ರಿಶೂಲ ಸಾಹಿಬ್ ಸಹ ಹುಝೂರ್ ಅನ್ವರ್ ಜೊತೆಯ ಭೇಟಿಯ ನಡುವೆಯೇ ಅಹ್ಮದಿಯಾ ಜಮಾಅತಿಗೆ ಸೇರುವ ಘೋಷಣೆ ಮಾಡಿದರು. ಅವರು ಹೇಳಿದರು. ನಾನು ದೀರ್ಘ ಅವಧಿಯಿಂದ ಅಹ್ಮದಿಅತ್ತಿನಿಂದ ಪರಿಚಿತನಾಗಿದ್ದೇನೆ ಮತ್ತು ಜಮಾಅತಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಬಂದಿದ್ದೇನೆ. ಆದರೆ ಬೈಅತ್ ಮಾಡಲಿಲ್ಲ. ನಾನು ನಿರ್ಣಯ ಕೈಗೊಳ್ಳುವುದರಲ್ಲಿ ಬಹಳ ತಡ ಮಾಡಿದ್ದು ಹೌದಾದರೂ ನನ್ನ ಬಳಿ ಇನ್ನು ತುಂಬ ಸಮಯವಿದೆ. ಆದ್ದರಿಂದ ಇಂದು ಪೂರ್ಣ ದೃಢತೆಯಿಂದ ಅಹ್ಮದಿಯಾ ಜಮಾಅತಿನಲ್ಲಿ ಸೇರುವ ಪ್ರತಿಜ್ಞೆ ಮಾಡುತ್ತೇನೆ. ಅವರು ಹುಝೂರ್ ಅನ್ವರ್ ಅವರ ಸಮುಕ್ಷಮದಲ್ಲಿ– ತನ್ನನ್ನು ಓರ್ವ ಶುದ್ಧ ಹಾಗೂ ಸಕ್ರಿಯಾ ಅಹ್ಮದಿಯಾಗಿರುವಂತೆ, ತ್ಯಾಗಮಯಿ ಅಹ್ಮದಿಯಾಗಲು ಅಲ್ಲಾಹ್‌ನಲ್ಲಿ ಪ್ರಾರ್ಥಿಸಲು ಕೇಳಿಕೊಂಡರು. ನಿಸ್ಸಂಶಯವಾಗಿಯೂ ಅಹ್ಮದಿಯಾ ಜಮಾಅತ್ ಪ್ರಸ್ತುತಪಡಿಸುತ್ತಿರುವ ಇಸ್ಲಾಮ್ ಯಥಾರ್ಥ ಇಸ್ಲಾಂ ಆಗಿದೆ. ಯಾವ ಸತ್ಯವನ್ನು ಅಹ್ಮದಿಯಾ ಜಮಾಅತ್ ಪ್ರಸ್ತುತಪಡಿಸುತ್ತಿದೆ ಅದು ವಿಜಯಿಯಾಗುವುದು. ನನಗೆ ಜಲ್ಸದ ಪರಿಸರದಲ್ಲಿ ಒಂದು ಅಸಾಮಾನ್ಯ ರೀತಿಯ ಆಧ್ಯಾತ್ಮಿಕತೆ ಅನುಭವಿಸುವ ಅವಕಾಶ ದೊರೆತಿದೆ. ನಾನು ಭರವಸೆ ಹೊಂದಿದ್ದೇನೆ. ಓರ್ವ ಸತ್ಯಸಂಧಕ ಅಹ್ಮದಿಯಾಗುವೆ. ಇಲ್ಲಿ ಅಹ್ಮದಿಯರ ರೀತಿ, ಅವರನ್ನು ಇಲ್ಲಿ ಸೇವೆ ಸಲ್ಲಿಸುತ್ತಿರುವುದನ್ನು ನಾನು ಕಂಡಿದ್ದೇನೆ. ನಾನು ಇಲ್ಲಿ ಎಲ್ಲಾ ಏರ್ಪಾಡುಗಳನ್ನು ಸ್ವಯಂ ಸೇವಕರಾಗಿ ಮಾಡುತ್ತಿದ್ದನ್ನು ಕಂಡಿದ್ದೇನೆ. ಅಹ್ಮದಿಯರ ಈ ಸಾಹಸ, ಈ ಉತ್ಸಾಹ, ದೃಢ ನಿಲುವು ಮತ್ತು ಅನುಸರಣೆಯಿಂದ ಸಾಬೀತಾಗುವುದೇನೆಂದರೆ ಈ ಜಮಾಅತ್ ಸತ್ಯವಾಗಿದೆ.

* ಅಲ್ಬಾನಿಯನ್ ತಂಡದಲ್ಲಿ ಶಾಮೀಲಾದ ಮಿತ್ರರೊಬ್ಬರು Hatim Nako ಸಾಹಿಬ್ ತನ್ನ ಪತ್ನಿಯ ಜೊತೆಯಲ್ಲಿ ಜಲ್ಸದಲ್ಲಿ ಭಾಗವಹಿಸಿದ್ದರು. ಅವರು ಜಲ್ಸ ಕುರಿತು ತಮ್ಮ ಭಾವನೆಗಳನ್ನು ಹೀಗೆ ಹಂಚಿಕೊಂಡರು. ಜಲ್ಸಕ್ಕೆ ಬರುವ ಮುಂಚೆ ಈ ಜಲ್ಸ ಹೀಗಿರಬಹುದೆಂದು ಅಂದಾಜಿಸಿರಲಿಲ್ಲ. ಆದರೆ ಇಲ್ಲಿ ಬಂದು ನನಗೆ ಇಲ್ಲಿಯ ಸುವ್ಯವಹಾರ, ಅತಿಥಿ ಸತ್ಕಾರ ಮತ್ತು ಪರಸ್ಪರ ಸದ್ವರ್ತನೆಯ ಉನ್ನತ ಮಟ್ಟ ಕಾಣಲು ಸಾಧ್ಯವಾಯಿತು. ಬರುವ ವರ್ಷ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ನನ್ನ ಮಿತ್ರರನ್ನು ಈ ಆಧ್ಯಾತ್ಮಿಕ ಜಲ್ಸದಲ್ಲಿ ಕರೆ ತರುವ ಬಯಕೆ ಇದೆ.

* ಮಹಿಳೆಯೋರ್ವಳು Mimoza koxhaj ಸಾಹಿಬಾ ತನ್ನ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸಿದರು. ಇಲ್ಲಿ ಬರುವ ಮುಂಚೆ ಈ ಜಲ್ಸ ಈ ತರದಲ್ಲಿ ಇರುವುದೆಂದು ಭಾವಿಸಿರಲಿಲ್ಲ. ಆದರೆ ಇಲ್ಲಿ ಬಂದು ಜಲ್ಸದಲ್ಲಿ ಅಹ್ಮದಿಯಾ ಜಮಾಅತಿನ ಪ್ರೀತಿ, ಸ್ನೇಹ, ಶಾಂತಿ ಮತ್ತು ಅತಿಥಿ ಸತ್ಕಾರದ ಅದ್ವಿತೀಯ ಮಾದರಿಗಳನ್ನು ಕಾಣುವ ಭಾಗ್ಯ ದೊರೆತಿದೆ. ಜಲ್ಸದ ಎಲ್ಲಾ ಏರ್ಪಾಡುಗಳು ಎಲ್ಲಾ ರೀತಿಯಿಂದಲು ಮಾದರೀಯು ಹಾಗೂ ಪರಿಪೂರ್ಣವಾಗಿದ್ದವು.

ಭೇಟಿಯ ನಡುವೆ ಅವರು ಹೇಳಿದರು. ಅಂದ ಹಾಗೆ ನಾನು ಅರ್ಥಶಾಸ್ತ್ರ ತಜ್ಞೆ ಆದ ಕಾರಣ ಎಲ್ಲಾ ಒಂದನ್ನು ಬಹಳ ಸೂಕ್ಷ್ಮವಾಗಿ ಅವಲೋಕಿಸುತ್ತೇನೆ ಮತ್ತು ಅದನ್ನು ಪರಿಶೀಲಿಸಲು ಪ್ರಯತ್ನಿಸುತ್ತೇನೆ. ನಿಮ್ಮ ಪ್ರೀತಿ ಆತ್ಮೀಯತೆಯಿಂದಲೇ ನನಗೆ ಧೈರ್ಯ ಬಂದಿದೆ. ಹೇಳಬಯಸುತ್ತೇನೆ. ಜಲ್ಸದ ಮಧ್ಯೆ ಬಹಳಷ್ಟು ಊಟ ಹಾಳಾಗುತ್ತದೆ. ಇಷ್ಟೆಲ್ಲಾ ಒಳ್ಳೆಯ ಉತ್ತಮ ವ್ಯವಸ್ಥೆಗಳಿರುವಾಗ ಈ ನಷ್ಟವನ್ನು ಸಹ ನಿವಾರಿಸಬಹುದು ಅನಿಸುತ್ತದೆ.

ಆಗ ಹುಝೂರ್ ಹೇಳಿದರು. ಜಲ್ಸದ ಏರ್ಪಾಡುಗಳು ಹೆಚ್ಚು ವಿಶಾಲ ಪ್ರಮಾಣದಲ್ಲಿರುವ ಕಾರಣ ಈ ತರಹದ ನ್ಯೂತನೆ ಆಗುವುದು ಸಹಜವಾಗಿದೆ. ಜನರ ಅಭ್ಯಾಸಗಳು ಸಹ ಒಂದು ರೀತಿಯಲ್ಲಿರುವುದಿಲ್ಲ ಕೆಲವರು ರೊಟ್ಟಿಯ ಬದಿಗಳನ್ನು ಬಿಟ್ಟುಬಿಟ್ಟರೆ, ಕೆಲವರು ರೊಟ್ಟಿ ಹಸಿವಾಗಿದೆ ಎಂದು ನೋಡಿ ಬಿಸಾಕಿಬಿಡುತ್ತಾರೆ. ಅಂತೂ ಊಟ ಹಾಳಾಗದಂತೆ ಪ್ರಯತ್ನ ಮಾಡುತ್ತೇವೆ. ಉಳಿದ ಊಟವನ್ನು ಸಂರಕ್ಷಿಸಬೇಕು. ನಾವು ಆಹಾರ ವ್ಯರ್ಥ ಆಗದಂತೆ ನೋಡಿಕೊಳ್ಳಬೇಕಾಗಿದೆ ಮತ್ತು ಬಡವರ ಬಗ್ಗೆಯೂ ಯೋಚಿಸಬೇಕಾಗಿದೆ. ಅವರಿಗೆ ಊಟ ಸಹ ದೊರೆಯುವುದಿಲ್ಲ. ಹುಝೂರ್ ಅನ್ವರ್ ಅವರಿಗೆ ಕೃತಜ್ಞತೆಯನ್ನು ಹೇಳಿದರು. ನೀವು ನಮ್ಮ ನ್ಯೂನತೆಯನ್ನು ಗಮನಕ್ಕೆ ತಂದಿದ್ದೀರಿ. ಹೀಗೆಯೇ ಸುಧಾರಣೆ ಆಗುವುದು ಮತ್ತು ಹೇಳಿದರು. ನಾನು ಸದಾ ಜಮಾಅತ್ ಬಾಂಧವರಿಗೆ ಈ ನ್ಯೂನತೆ ಕಡೆ ಗಮನ ಸೆಳೆಯುತ್ತಿರುತ್ತೇನೆ. ಏಕೆಂದರೆ ಹೀಗೆ ಹೇಳಿದರೆ ಸುಧಾರಣೆ ಆಗುವುದು.

* ಅಲ್ಬಾನಿಯಾ ತಂಡದ ಹುಝೂರ್‌ರೊಡನೆಯ ಈ ಭೇಟಿ 8 ಗಂಟೆ 45 ನಿಮಿಷಕ್ಕೆ ಮುಕ್ತಾಯವಾಯಿತು. ಕೊನೆಯಲ್ಲಿ ತಂಡದ ಸದಸ್ಯರೆಲ್ಲರೂ ಹುಝೂರ್‌ರ ಜೊತೆಯಲ್ಲಿ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

ಹುಝೂರ್ ಅನ್ವರ್ ಪ್ರೀತಿಪೂರ್ವಕವಾಗಿ ತಂಡದ ಸದಸ್ಯರೆಲ್ಲರಿಗೂ ಲೇಖನಿ ನೀಡಿದರು. ಮತ್ತು ಮಕ್ಕಳಿಗೆ ಚಾಕ್ಲೇಟ್ ನೀಡಿದರು.

* ಅನಂತರ ಹುಝೂರ್ ಅನ್ವರ್ ತಮ್ಮ ಕಚೇರಿಗೆ ತೆರಳಿದರು. ಅಲ್ಲಿ ಜನಾಬ್ ಅಮೀರ್ ಸಾಹಿಬ್ ಕೆನಡಾ ಮಾನ್ಯ ಮಲಿಕ್ ಲಾಲ್ ಖಾನ್ ಸಾಹಿಬ್ ಹುಝೂರ್‌ರೊಡನೆ ಕಚೇರಿಯ ಕೆಲಸದ ನಿಮಿತ್ತ ಭೇಟಿ ಮಾಡಿದರು. ಅವರ ಮುಂದೆ ಹಲವು ಸಮಸ್ಯೆಗಳ ಬಗ್ಗೆ ವಿಚಾರಿಸಿ ಮಾರ್ಗದರ್ಶನ ಪಡೆದರು.

ಅನಂತರ ಹುಝೂರ್ ತಮ್ಮ ವಸತಿ ನಿಲಯಕ್ಕೆ ನಿರ್ಗಮಿಸಿದರು.

ಅನಂತರ 9 ಗಂಟೆ 50 ನಿಮಿಷಕ್ಕೆ ಹುಝೂರ್ ಅನ್ವರ್ ಮಸೀದಿಯ ಸಭಾಂಗಣಕ್ಕೆ ಆಗಮಿಸಿದರು. ಅಲ್ಲಿ ಕಾರ್ಯಕ್ರಮದನ್ವಯ ಮುಕರ್ರಮ್ ಹೈದರ್ ಅಲಿ ಝಫರ್ ಸಾಹಿಬ್ ಮುಬಲ್ಲಿಗ್ ಇನ್‌ಚಾರ್ಜ್ ಜರ್ಮನಿ 20 ನಿಕಾಹ್ (ವಿವಾಹ) ಗಳ ಘೋಷಣೆ ಮಾಡಿದರು. ಈ ನಡುವೆ ಹುಝೂರ್ ಆಗಮಿಸಿ ಕೊನೆಯಲ್ಲಿ ದುಆ ಮಾಡಿಸಿದರು.

ಅನಂತರ ಹುಝೂರ್ ಅನ್ವರ್ ಮಗ್ರಿಬ್ ಈಶಾ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟು ತಮ್ಮ ವಸತಿನಿಲಯಕ್ಕೆ ತೆರಳಿದರು.

**9 ಜೂನ್ 2015 ಸೋಮವಾರ**

ಹುಝೂರ್ ಅನ್ವರ್ ಮುಂಜಾನೆ 4:30 ಗಂಟೆಗೆ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟು ತಮ್ಮ ವಸತಿ ನಿಲಯಕ್ಕೆ ತೆರಳಿದರು.

ಮುಂಜಾನೆ ಹುಝೂರ್ ಅನ್ವರ್ ಕಚೇರಿಯ ಅಂಚೆಗಳು ಮತ್ತು ವರದಿಗಳು ಹಾಗೂ ಪತ್ರಗಳು ಪರಿಶೀಲಿಸಿದರು ಮತ್ತು ನಿರ್ದೇಶನಗಳನ್ನು ನೀಡಿದರು.

**"ಮಸ್ಜಿದ್ ಬೈತುಸ್ಸಲಾಂ" ನ ಅಡಿಪಾಯ**

ಇಂದಿನ ಕಾರ್ಯಕ್ರಮದನ್ವಯ ISERLOHN ನಗರದಲ್ಲಿ ಮಸ್ಜಿದ್ ಬೈತುಸ್ಸಲಾಮಿನ ಅಡಿಪಾಯ ಹಾಗೂ VECHTA ನಗರದಲ್ಲಿ ಮಸ್ಜಿದ್ ಬೈತುಲ್ ಖಾದರ್‌ನ ಉದ್ಘಾಟನಾ ಸಮಾರಂಭಗಳಿದ್ದವು.

ಈ ಎರಡೂ ಸಮಾರಂಭಗಳ ನಂತರ ರಾತ್ರಿಯಲ್ಲಿ ತಂಗುವ ವ್ಯವಸ್ಥೆ OSNABRUK ಜಮಾಅತಿನಲ್ಲಿತ್ತು. ಮರುದಿನ ಇಲ್ಲಿಂದ ಲಂಡನ್ನಿಗೆ ತೆರಳಬೇಕಾಗಿತ್ತು.

ಹುಝೂರ್ ಅನ್ವರ್(ಅಬಿಅ) ಮುಂಜಾನೆ 10 ಗಂಟೆ 45 ನಿಮಿಷಕ್ಕೆ ತನ್ನ ವಸತಿ ನಿಲಯದಿಂದ ಹೊರ ಬಂದರು. ಬೈತುಸ್ಸುಬಾಹುವಿನ ಹೊರಾಂಗಣ ಜಮಾಅತ್ ಬಾಂಧವರ, ಪುರುಷರು, ಮಹಿಳೆಯರಿಂದ, ಯುವಕ, ಯುವತಿಯರಿಂದ ತುಂಬಿ ಹೋಗಿತ್ತು. ಅವರು ಗುಂಪು ಗುಂಪಾಗಿ ವಿದಾಯ ಕವನಗಳನ್ನು ಹೇಳುತ್ತಿದ್ದರು.

ಜಮಾಅತ್ ಬಾಂಧವರು ಎರಡೂ ಬದಿಯಲ್ಲಿ ಸಾಲುಗಟ್ಟಿ ನಿಂತಿದ್ದರು. ಹುಝೂರ್ ಅನ್ವರ್ ತಮ್ಮ ಕೈಯನ್ನು ಬೀಸುತ್ತಾ ಮಹಿಳೆಯರ ಕಡೆ ಹೋಗಿ ಎಲ್ಲರಿಗೂ ಅಸ್ಸಲಾಮು ಅಲೈಕುಂ ಹೇಳಿ ದುಆ ಮಾಡಿಸಿದರು.

ಅನಂತರ ತಂಡವು ಪ್ರಯಾಣ ಬೆಳೆಸಿತು ಫ್ರೆಂಕ್‌ಫರ್ಟಿನಿಂದ

*(ಪುಟ ಸಂಖ್ಯೆ-09 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800–103–2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.